ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 47
೨೧ ಸೆಪ್ಟಂಬರ್ ೧೯೫೮
*
ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಎರಡು ಬಗೆ ನೀತಿ ಅನುಸರಿಸುವವರು ಯಾರು ?

ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರವು ಕಮ್ಯೂನಿಸ್ಟರಿಗೊಂದು, ಕಮ್ಯೂನಿಸ್ಟರಲ್ಲದವರಿಗೊಂದು ಎರಡು ಬಗೆಯ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದ್ದಾರೆ. ಆದರೆ ಅವರು ತಮ್ಮ ಆರೋಪಣೆಗೆ ಪುರಾವೆಯುನ್ನು ನೀಡಿಲ್ಲ. ಮುಖ್ಯ ಮಂತ್ರಿ ಕಾಮ್ರೇಡ್ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಧೇಬರರೊಂದಿಗೆ ತಾವು ನಡೆಸಿದ ಮಾತುಕತೆಯನ್ನು ಕುರಿತು, ಧೇಬರರ ಆಪಾದನೆಗಳನ್ನು ಕುರಿತು ಇತ್ತಿರುವ ದೀರ್ಘ ಹೇಳಿಕೆಯ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

ಧೇಬರರು ನನ್ನೊಂದಿಗೆ ಮಾತುಕತೆ ನಡೆಸಿದ್ದಕ್ಕೆ ನಾನು ಕೃತಜ್ಞನಾಗಿದ್ದೇನೆ. ಅವರು ಮಾತುಕತೆಗಳು ನಡೆದಾಗ ಎರಡು ಆರೋಪಗಳನ್ನು ಮಾಡಿದ್ದಾರೆ. ಒಂದನೆಯದು ಕಮ್ಯೂನಿಸ್ಟ್ ಸರಕಾರವು ಕಮ್ಯೂನಿಸ್ಟರಿಗೊಂದು, ಕಮ್ಯೂನಿಸ್ಟರಲ್ಲದವರಿಗೊಂದು ಎರಡು ಬಗೆಯ ನೀತಿ ಅನುಸರಿಸುತ್ತಿದೆ. ಎರಡನೆಯದು, ಕಮ್ಯೂನಿಸ್ಟ್ ಪಕ್ಷವು ಆಡಳಿತೆಯಲ್ಲಿ ಪ್ರವೇಶಿಸುತ್ತಿದೆ.

ಈ ಆರೋಪಗಳನ್ನು ಅವರು ಮಾಡಿದಾಗ, ನಾನು ಅವರಿಗೆ ಸರಕಾರವಾಗಲಿ ಕಮ್ಯೂನಿಸ್ಟ್ ಪಕ್ಷವಾಗಲೀ ಅಂಥ ನೀತಿ ಅನುಸರಿಸಿದಲ್ಲಿ ಪರಿಸ್ಥಿತಿ ಹದಗೆಡುವುದೆಂದಲ್ಲೂ ನಮ್ಮ ಸರಕಾರವು ನಿಷ್ಪಕ್ಷಪಾತವಾದ ನೀತಿ ಅನುಸರಿಸುತ್ತಿದೆ.

ಹಿಂದೆ ಕಾಂಗ್ರೆಸ್ ಆಡಳಿತೆಯಲ್ಲಿ ಸರಕಾರದ ಹುದ್ದೆಗೆ ನೇಮಕವಾಗುವಾಗ್ಗೆ, ಸಂಬಂಧಪಟ್ಟ ಅರ್ಜಿದಾರನಿಗೆ ಎಲ್ಲ ಅರ್ಹತೆಗಳಿದ್ದರೂ ಅತ ಕಮ್ಯೂನಿಸ್ಟ್ ಅಥವಾ ಕಮ್ಯೂನಿಸ್ಟ್ ಸಂಬಂಧಿಯಾಗಿದ್ದರೆ, ಅವನಿಗೆ ಕೆಲಸ ನಿರಾಕರಿಸಬೇಕೆಂದು ಸರಕಾರದ ಆಜ್ಞೆ ಇತ್ತು. ಸರಕಾರೀ ನೌಕರರು ಕಮ್ಯೂನಿಸ್ಟ್ ಪಕ್ಷದೊಂದಿಗೆ ಸಂಪರ್ಕವಿದೆ ಎಂದು ತಿಳಿದುಬಂದಲ್ಲಿ ಕೂಡ ಅವರನ್ನು ಕಿತ್ತುಹಾಕಬೇಕೆಂಬ ಆಜ್ಞೆ ಇತ್ತು. ಪಬ್ಲಿಕ್ ಸರ್ವೀಸ್ ಕಮಿಶನ್ನಿನಿಂದ ಆಯ್ಕೆಯಾಗಿದ್ದರೂ ಸಹ ಈ ನಿರ್ಬಂಧವಿತ್ತು. ಕಮಿಶನ್ನಿನ ಯಾವ ಶಿಫಾರಸನ್ನು ತಳ್ಳಿಹಾಕಿಲ್ಲವೆಂದು ಅವರಿಗೆ ತಿಳಿಸಿದ್ದೇನೆ. ಇದು ನಮ್ಮ ಸರಕಾರವು ನಿಷ್ಪಕ್ಷಪಾತವಾದ ನೀತಿ ಅನುಸರಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಇನ್ನು ಖಾಸಗಿ ಸಮಿತಿಗಳಿಗೆ ನೇಮಕ. ಹಿಂದೆ ಕಾಂಗ್ರೆಸ್ ಆಡಳಿತೆಯಲ್ಲಿದ್ದಾಗ, ಸರಕಾರ ನೇಮಿಸುತ್ತಿದ್ದ ಖಾಸಗೀ ಸಮಿತಿಗಳಲ್ಲಿ ಕಮ್ಯೂನಿಸ್ಟ್ ಸದಸ್ಯರಿಗೆ ಪ್ರಾತಿನಿಧ್ಯ ಕೊಡುತ್ತಲೇ ಇರಲಿಲ್ಲ. ಕಮ್ಯೂನಿಸ್ಟ್ ಪಾರ್ಟಿಯನ್ನು ಸಂಪೂರ್ಣವಾಗಿ ದೂರ ಇರಿಸಲಾಗಿತ್ತು. ಆದರೆ ಇಂದು ನಾವು ಅಧಿಕಾರಕ್ಕೆ ಬಂದನಂತರ ಪರಿಸ್ಥಿತಿ ಬೇರೆಯಾಗಿದೆ. ಶಾಸನ ಸಭೆಯಲ್ಲಿ ವಿವಿಧ ಪಕ್ಷಗಳ ಸಂಖ್ಯೆಗನುಗುಣವಾಗಿ ಎಲ್ಲ ಖಾಸಗೀ ಸಮಿತಿಗಳಲ್ಲೂ ಸಹ ಪ್ರಾತಿನಿಧ್ಯ ಕೊಡಲಾಗಿದೆ. ಆದರೂ ಸಹ ಕಾಂಗ್ರೆಸ್ ನಾಯಕರು ಸುಳ್ಳು ಆರೋಪಗಳನ್ನು ಹೊರೆಸುತ್ತಿದ್ದಾರೆ.

ನಮ್ಮ ಸರಕಾರವು ಭೇದಭಾವ ಎಣಿಸುತ್ತಿದೆ, ಕಮ್ಯೂನಿಸ್ಟ್ ಪಕ್ಷವು

[ಕೊನೇ ಪುಟ ನೋಡಿ]

ಕಾಂಗ್ರೆಸ್ ಅಧ್ಯಕ್ಷ ಧೇಬರರಿಗೆ

ಇ. ಎಂ. ಎಸ್. ಉತ್ತರ

ದು ಒಪ್ಪುವುದಾಗಿ ತಿಳಿಸಿದೆ. ಆದ್ದರಿಂದಾಗಿ ಧೇಬರರು ತಮ್ಮ ಆರೋಪಗಳನ್ನು ಪುಷ್ಟೀಕರಿಸಿ ರುಜುವಾತನ್ನಿತ್ತಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದೆ.

ನ್ಯಾಯವಲ್ಲದ ಅಂಶಗಳು

ಧೇಬರರಾಗಲೀ ಅಥವ ಇತರ ಕಾಂಗ್ರೆಸ್ ನಾಯಕರುಗಳಾಗಲೀ ಸತ್ಯಾಂಶಗಳ ಕಡೆ ಗಮನಕೊಡುವ ಗೋಜಿಗೆ ಹೋಗದೆ, ಲೋಕಾಭಿರಾಮವಾಗಿ ತಮ್ಮ 'ಅಭಿಪ್ರಾಯ'ಗಳನ್ನು ವ್ಯಕ್ತಗೊಳಿಸಿದಲ್ಲಿ ಸರಿಯಾಗದು ಎಂದು ಅವರಿಗೆ ನಾನು ಸ್ಪಷ್ಟಪಡಿಸಿದ್ದೇನೆ.

ಈ ಸಂದರ್ಭದಲ್ಲಿ ನಮ್ಮ ಸರಕಾರವು ಅನುಸರಿಸುತ್ತಿರುವ ನೀತಿಗಳನ್ನು ಇತರ ಕಾಂಗ್ರೆಸ್ ಸರಕಾರಗಳು ಅನುಸರಿಸಿರುವ ನೀತಿಗಳನ್ನು ಕುರಿತು ವಿವರಿಸುತ್ತಿದ್ದೇನೆ. ಸರಕಾರೀ ನೌಕರಿಗೆ ನೇಮಕದ ಪ್ರಶ್ನೆಯಲ್ಲಿ, ಮತ್ತು ಸರಕಾರದಿಂದ ನೇಮಿತವಾಗಿರುವ ಖಾಸಗೀ ಸಮಿತಿಗಳ ವಿಷಯ

ಕಮ್ಯೂನಿಸ್ಟ್ ಪಾರ್ಟಿಯ ವಿರುದ್ಧ ಇಂಥ ಭೇದ ಭಾವವು ನಾವು ಅಧಿಕಾರ ವಹಿಸಿಕೊಳ್ಳುವವರೆಗೂ ಇತ್ತು. ನಾವು ಅದನ್ನು ನಿರ್ಮೂಲ ಮಾಡಿದೆವು. ಇಂಥ ನಿರ್ಬಂಧವು ಇನ್ನೂ ಇತರ ರಾಜ್ಯಗಳಲ್ಲಿರುವುದಾಗಿ ನಾನು ಹೇಳುತ್ತೇನೆ. ಈ ಭೇದ ನೀತಿಯನ್ನು ಅವರು ಮತ್ತು ಅವರ ಸ್ನೇಹಿತರು ಅನುಸರಿಸುವುದು ನ್ಯಾಯವೇ ಎಂದು ಅವರನ್ನು ಕೇಳಿದೆ. ಇದು ಕಮ್ಯೂನಿಸ್ಟರಿಗೊಂದು ಬೇರೆಯವರಿಗೊಂದು ನೀತಿಯಲ್ಲವೇ ? ಎಂದು ಅವರನ್ನು ಕೇಳಿದೆ. ಈಗ ನಾವು ಯಾವ ಬಗೆಯ ಭೇದ ಭಾವವನ್ನೂ ಅನುಸರಿಸುತ್ತಿಲ್ಲ ಎಂದು ಸ್ಪಷ್ಟಪಡಿಸಿದೆ.

ಬೇಧಭಾವ ಇಲ್ಲ

ಸರಕಾರೀ ಹುದ್ದೆಗೆ ನೇಮಕ ಮಾಡುವಾಗ ಎಲ್ಲ ಹುದ್ದೆಗಳನ್ನು ಈಗ ಪಬ್ಲಿಕ್ ಸರ್ವೀಸ್ ಕಮೀಶನ್ನಿನ ಮೂಲಕ ನಡೆಸುತ್ತಿರುವುದನ್ನು, ಸರಕಾರವು ಈವರೆಗೆ,

ಅಕ್ಟೋಬರ್ ೧

ಭಾರತ - ಚೀಣಾ ಮೈತ್ರಿ ದಿನವನ್ನಾಗಿ

ಸಂಭ್ರಮದಿಂದ ಆಚರಿಸಿರಿ

ಅಕ್ಟೋಬರ್ ೧, ಚೀಣದ ರಾಷ್ಟ್ರೀಯ ದಿನ. ನಮ್ಮ ನೆರೆ ನಾಡಾದ ಚೀಣಾ ಸಮಾಜವಾದೀ ನಿರ್ಮಾಣ ಕಾರ್ಯದಲ್ಲಿ ಅದ್ಭುತವಾದ ವಿಜಯಗಳನ್ನು ಗಳಿಸಿದೆ. ಹಿಂದೆಂದೂ ಕಾಣದಿದ್ದಷ್ಟು ಮಹತ್ವವಾದ ಪ್ರಗತಿಯನ್ನು ಸಾಧಿಸಿದೆ. ಕ್ರಾಂತಿಪೂರ್ವದಲ್ಲಿ ಉಕ್ಕಿನ ಉತ್ಪಾದನೆಯು ಅರ್ಧ ಮಿಲಿಯ ಟನ್‌ಗಳಿದ್ದುದು ಇಂದು ಏಳು ಮಿಲಿಯ ಟನ್‌ಗಳಷ್ಟಾಗಿದೆ. ವ್ಯವಸಾಯ ಕ್ಷೇತ್ರದಲ್ಲಿ ಮತ್ತು ಸಣ್ಣ ಕೈಗಾರಿಕೆ ಕ್ಷೇತ್ರದಲ್ಲಿ ಅಪಾರವಾದ ಪ್ರಗತಿ ಸಾಧಿಸಿದೆ. ಒಂದು ಕಾಲದಲ್ಲಿ ಬಲಹೀನವಾಗಿದ್ದ ಹಿಂದುಳಿದಿದ್ದ ಚೀಣ ಇಂದು ಮಹಾ ಶಕ್ತಿಯಾಗಿ ಪ್ರಬಲ ರಾಷ್ಟ್ರವಾಗಿದೆ.

ಅಮೆರಿಕನ್ ಸಾಮ್ರಾಜ್ಯವಾದಿಗಳು ತಮ್ಮ ಅನುಭವದಿಂದಾಗಲೀ ಚೀಣದ ಅನುಭವದಿಂದಾಗಲೀ ಏನೂ ಪಾಠ ಕಲಿತಿಲ್ಲ. ಇತಿಹಾಸ ಪುಟವನ್ನು ಹಿಂತಿರುವಲು ಅವರು ನೋಡುತ್ತಿದ್ದಾರೆ. ಜನತಾ ಚೀಣವನ್ನು ಮಾನ್ಯ ಮಾಡದೆ ತಮ್ಮ ಬಾಲಬಡುಕ ಚಿಯಾಂಗನಿಗೆ ಮಿಲಿಟರಿ ರಕ್ಷಣೆಯಿತ್ತು ಚೀಣದ ಆಂತರಿಕ ವ್ಯವಹಾರದಲ್ಲಿ ಪ್ರವೇಶಿಸುತ್ತಿದೆ. ಇಂದು ಚೀಣದ ತೀರಪ್ರದೇಶದಲ್ಲಿ, ಕಡಲಿನಲ್ಲಿ ಅಮೆರಿಕದ ನೌಕಾಪಡೆಗಳು ನಿಂತಿರುವುದು ಇಡೀ ಏಷ್ಯದ ಶಾಂತಿಗೆ ಬಾಧಕವಾಗಿದೆ. ಪಶ್ಚಿಮ ಏಷ್ಯದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಈ ಆಕ್ರಮಣಕಾರೀ ಧೋರಣೆಯನ್ನು ಹಿಮ್ಮೆಟ್ಟಿಸುವುದು ಅತ್ಯಗತ್ಯದಾಗಿದೆ.

ಭಾರತ ಚೀಣಾ ಮೈತ್ರಿ ಸಂಘವು ಎರಡು ವಾರಗಳ ಕಾಲ ಸಭೆ ಮೆರವಣಿಗೆಗಳನ್ನು ನಡೆಸಿ. ಅಕ್ಟೋಬರ್ ಒಂದರಂದು ಬೃಹತ್ ಪ್ರದರ್ಶನ ನಡೆಸಬೇಕೆಂದು ಕರೆಯಿತ್ತಿದೆ. ಎಲ್ಲ ಪಾರ್ಟಿ ಘಟಕಗಳೂ ಸಹ ಇತರ ಸಂಘ ಸಂಸ್ಥೆಗಳೊಂದಿಗೆ ಸೇರಿ ಭಾರತ—ಚೀಣಾ ಮೈತ್ರಿ ದಿನವನ್ನು ಯಶಸ್ವಿಯಾಗಿ ಆಚರಿಸಬೇಕೆಂದು ವಿನಂತಿಸುತ್ತೇವೆ.

ಎಲ್ಲ ಪಾರ್ಟಿ ಘಟಕಗಳೂ ಪಾರ್ಟಿ ಆಶ್ರಯದಲ್ಲಿ ಸಭೆ ಸೇರಿಸಬೇಕೆಂದು ಕರೆ ಕೊಡುತ್ತೇವೆ.

ಅಕ್ಟೋಬರ್ ೧, ರಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿ, ಭಾರತ—ಚೀಣಾ ಜನತೆಯ ದೃಢ ಮೈತ್ರಿಯನ್ನು ಪ್ರದರ್ಶಿಸಬೇಕೆಂದು ಕರೆಯಿಯುತ್ತೇವೆ.

- ಅಮೆರಿಕನರೆ ತಾಯ್‌ವಾನ್‌ನಿಂದ ಕಾಲ್ತೆಗೆಯಿರಿ !
- ಯುನೋದಲ್ಲಿ ಚೀಣಕ್ಕೆ ನ್ಯಾಯವಾದ ಸ್ಥಾನ ಸಲ್ಲಲಿ !
- ಭಾರತ–ಚೀಣ ಮೈತ್ರಿ ಚಿರಾಯುವಾಗಲಿ !

—ಭಾರತ ಕಮ್ಯೂನಿಸ್ಟ್ ಪಾರ್ಟಿ,
ರಾಷ್ಟ್ರೀಯ ಮಂಡಲಿಯ ಸೆಕ್ರಟೇರಿಯಟ್

ಸಂಪಾದಕೀಯ

ಆಹಾರ ಸಮಸ್ಯೆ

ಆಹಾರ ಸಮಸ್ಯೆ ರಾಷ್ಟ್ರೀಯ ಪ್ರಶ್ನೆಯಾಗಿದೆ ಎಂದು ಎಲ್ಲರೂ ಒಪ್ಪಿದ್ದಾರೆ. ಪರಿಸ್ಥಿತಿ ಗಂಭೀರವಾಗಿರುವುದರಿಂದಾಗಿ ಸರಕಾರವು ಸರ್ವ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಬೇಕಾಗಿ ಬಂದಿದೆ. ಪಾರ್ಲಿಮೆಂಟಿನಲ್ಲಿ ವಿವಿಧ ಪಕ್ಷಗಳ ಸದಸ್ಯರನ್ನು ಸೇರಿಸಿ ಆಹಾರ ಪರಿಸ್ಥಿತಿಯನ್ನು ಕುರಿತು ಚರ್ಚೆ ನಡೆಸಲಾಗಿದೆ. ಸರಕಾರವು ಪರಿಸ್ಥಿತಿಯನ್ನೆದುರಿಸಲು ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸಲಾಗಿದೆ. ರಾಷ್ಟ್ರದ ಉಭಯ ಸಭೆಗಳಲ್ಲೂ ಸಹ ಆಹಾರ ಸಮಸ್ಯೆಯನ್ನು ಕುರಿತು ಚರ್ಚೆ ನಡೆದಿದೆ.

ಆಹಾರ ಸಚಿವ ಎ. ಪಿ. ಜೈನ್‌ರವರು ಚರ್ಚೆಗೆ ಉತ್ತರ ನೀಡುತ್ತ ಸರಕಾರವು ಆದಷ್ಟು ಹೆಚ್ಚು ಧಾನ್ಯಗಳನ್ನು ಶೇಖರ ಮಾಡಿಕೊಂಡು, ಬೆಲೆಯನ್ನು ಹತೋಟಿಗೆ ತರುವುದೆಂದೂ, ಅದೇ ಸರಕಾರದ ನೀತಿಯಾಗಿದೆಯೆಂದೂ ಘೋಷಿಸಿದ್ದಾರೆ. ಸರಕಾರವು ಸಾಕಷ್ಟು ದಾಸ್ತಾನಿಟ್ಟುಕೊಳ್ಳುವುದರ ಮೂಲಕ ದಾಸ್ತಾನುಗಾರರ ಪುಂಡಾಟಿಕೆಯನ್ನು ಮುರಿಯಲು ಯತ್ನಿಸುವುದೆಂದು ತಿಳಿಸಿದ್ದಾರೆ. ಮುಂಬರುವ ರಾಬಿ ಬೆಳೆಯ ಫಲಿತಾಂಶದ ಮೇಲೆ ಆಶಾಕಿರಣ ಬೆಳಗುತ್ತಿದೆ ಎಂದು ತಿಳಿಸಿದ್ದಾರೆ. ಮುಂದಿನ ರಾಬೀ ಬೆಳೆಗೆ ಅದನ್ನು ಸಫಲಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಎಲ್ಲ ರಾಜ್ಯ ಸರಕಾರಗಳಿಗೂ ಆದೇಶವೀಯಲಾಗಿದೆ ರಾಷ್ಟ್ರಾಧ್ಯಕ್ಷರಿಂದ ಹಿಡಿದು ಸರಕಾರದ ಎಲ್ಲ ನಾಯಕರೂ ರಾಬಿ ಬೆಳೆಯನ್ನು ಯಶಸ್ವಿಯಾಗಿಸಲು ಕರೆ ಕೊಟ್ಟಿದ್ದಾರೆ. ಇದು ಎಷ್ಟು ಮಟ್ಟಿಗೆ ಫಲಿತವಾದೀತೆಂದು ಹೇಳುವುದು ಸಾಧ್ಯವಾಗದಿದೆ. ಏಕೆಂದರೆ ಉತ್ಪಾದನೆಯ ವಿವಿಧ ಅಂಗಗಳ ನಡುವೆ ಸಾಕಷ್ಟು ಸಾಮರಸ್ಯವಿಲ್ಲದಿರುವುದೇ ಇದಕ್ಕೆ ಕಾರಣ. ಮೈಸೂರಿನ ಆಹಾರ ಸಚಿವರು ಮಾತನಾಡುತ್ತ, ಸರಕಾರದ ವಿವಿಧ ಇಲಾಖೆಗಳ ನಡುವೆ ಸಾಮರಸ್ಯವಿರುವುದಿಲ್ಲ. ಇದರಿಂದ ಸರಕಾರ ರಾಬೀ ಬೆಳೆಯ ಚಳವಳಿಗೆ ಧಕ್ಕೆ ಬರಬಹುದು ಎನ್ನುವ ರೀತಿಯಲ್ಲಿ ಹೇಳಿಕೊಂಡಿದ್ದಾರೆ.

ರಾಜ್ಯ ಸರಕಾರಗಳು ಆಹಾರ ಸಮಸ್ಯೆಯನ್ನು ಸರಿಯಾಗಿ ಪರಿಗಣಿಸದೆ, ಸರಿಯಾದ ನೀತಿ ಅನುಸರಿಸದೆ ಈ ಪರಿಸ್ಥಿತಿ ಉಂಟಾಗಿದೆ. ಯೋಜನೆಗಳನ್ನು ಸರಿಯಾಗಿ ಕಾರ್ಯಗತ ಮಾಡದಿರುವುದರಿಂದಾಗಿ, ಉತ್ಪಾದನೆ ಹೆಚ್ಚುವುದರ ಬದಲು ಅನೇಕ ರಾಜ್ಯಗಳಲ್ಲಿ ಕಡಿಮೆಯಾಗಿದೆ. ರಾಜ್ಯ ಸರಕಾರಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸದಿದ್ದಲ್ಲಿ, ಆಹಾರ ಪರಿಸ್ಥಿತಿಯನ್ನೆದುರಿಸಲು ಯಾವ ಕ್ರಮವೂ ಯಶಸ್ವಿಯಾಗಲಾರದು.

ದಾಸ್ತಾನುಗಾರರ ಪುಂಡಾಟಿಕೆಯನ್ನು ಮುರಿಯಲು ಸರಕಾರ ಈವರೆಗೆ ಕ್ರಮ ತೆಗೆದುಕೊಂಡಿಲ್ಲ. ದಾಸ್ತಾನುಗಾರರ ಜೂಜುಕೋರತನಕ್ಕೆ ಸಿಲುಕಿ ಜನತೆ ವಿಪರೀತ ಬೆಲೆ ತೆರಬೇಕಾಗಿದೆ. ಆಹಾರ ಧಾನ್ಯಗಳ ಬೆಲೆ ಒಂದೇ ಸಮನಾಗಿ ಏರುತ್ತಿದ್ದು, ಬಡ ಜನರ ಕೈಗೆಟಕಲಾರದಂತಾಗಿದೆ. ದಾಸ್ತಾನುಗಾರರ ಪುಂಡಾಟಿಕೆಯನ್ನಡಗಿಸಲು ಸರಕಾರವು ಅವರ ವಶದಲ್ಲಿರುವ ಆಹಾರ ಧಾನ್ಯಗಳನ್ನು ವಶಪಡಿಸಿಕೊಂಡು ತೀವ್ರವಾದ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಸಾಧ್ಯವಿಲ್ಲ. ರಿಜರ್ವ ಬ್ಯಾಂಕಿನ ಮೂಲಕ ಬ್ಯಾಂಕುಗಳು ಆಹಾರ ಧಾನ್ಯಗಳ ಮೇಲೆ ಹೆಚ್ಚು ಹಣ ಮುಂಗಡ ಕೊಡಕೂಡದೆಂದು ವಿಧಿ ಹಾಕಲಾಗಿದೆ. ಇದರಿಂದ ಹೆಚ್ಚು ಪ್ರಯೋಜನವಾಗದು. ಹಿಂದೆ ಈ ಕ್ರಮ ತೆಗೆದುಕೊಳ್ಳಲಾಗಿದ್ದರೂ, ಹೆಚ್ಚು ಪರಿಣಾಮಕಾರಿಯಾಗಿಲ್ಲ.

ಸರ್ಕಾರದ ಆಹಾರ ನೀತಿಯನ್ನು ವಿರೋಧಿಸಲು ಮತ್ತು ಆಹಾರ ಸಮಸ್ಯೆಯ ಗಂಭೀರತೆಯನ್ನು ಆಡಳಿತಗಾರರ ಗಮನಕ್ಕೆ ತರಲು ಉತ್ತರ ಪ್ರದೇಶದಲ್ಲಿ ತೀವ್ರವಾದ ಚಳವಳಿ ಕಳೆದ ಕೆಲವಾರಗಳಿಂದ ನಡೆಯುತ್ತಿದೆ ಉತ್ತರ ಪ್ರದೇಶದ ಸರಕಾರ ದಬ್ಬಾಳಿಕೆ ನೀತಿಯನ್ನನುಸರಿಸಿ, ಆಹಾರ ಸಮಸ್ಯೆಯನ್ನು ಪರಿಹರಿಸುವ ಬದಲು, ಚಳವಳಿಯನ್ನು ಮಟ್ಟ ಹಾಕಲು ಯತ್ನಿಸುತ್ತಿರುವುದು ಖಂಡನೀಯವಾಗಿದೆ. ಪಶ್ಚಿಮ ಬಂಗಾಳದಲ್ಲಿಯೂ ಸಹ ಸರಕಾರದ ಆಹಾರ ನೀತಿಯ ವಿರುದ್ಧ ಚಳವಳಿ ಪ್ರಾರಂಭವಾಗಿದೆ. ಸರಕಾರವು ಆಹಾರ ಧಾನ್ಯಗಳ ಬೆಲೆಯನ್ನು ಹತೋಟಿಗೆ ತರಲು, ಸರಿಯಾಗಿ ಸರಬರಾಜು ನಡೆಸಲು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಉಳಿದ ಪ್ರದೇಶಗಳಲ್ಲೂ ಜನತೆ ಹೋರಾಟ ಆರಂಭಿಸುವುದು ಖಂಡಿತ. ಸರಕಾರದ ವಕ್ತಾರರುಗಳು ದಿನ ಬೆಳಗ್ಗೆ ಹೇಳಿಕೆ ಕೊಟ್ಟು ಆಹಾರದ ಪರಿಸ್ಥಿತಿ ತೃಪ್ತಿಕರವಾಗಿದೆ, ಬೆಲೆ ಏರಿಕೆ ತಡೆಯಲು ಸರಕಾರ ಕ್ರಮ ತೆಗೆದುಕೊಳ್ಳುತ್ತಿದೆ ಎಂದಷ್ಟೇ ಹೇಳುತ್ತಿದ್ದಲ್ಲಿ ಅದು ಹಸಿದ ಹೊಟ್ಟೆಯನ್ನು ತಣಿಸಲಾರರು.

ಸರಕಾರವು ಆಹಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಕ್ರಮ ತೆಗೆದುಕೊಳ್ಳಲಿ. ದಾಸ್ತಾನುಗಾರರ ದಾಸ್ತಾನನ್ನು ವಶಪಡಿಸಿಕೊಳ್ಳುವುದು, ಆದಷ್ಟು ಹೆಚ್ಚು ಅಗ್ಗದರದ ಅಂಗಡಿಗಳನ್ನು ತೆರೆದು ಅವುಗಳಿಗೆ ಧಾನ್ಯವನ್ನು ಸರಬರಾಜು ಮಾಡಿ, ಬೆಲೆ ಏರಿಕೆಯನ್ನು ತಡೆಯಲು ಯತ್ನಿಸುವುದು, ಅಭಾವ ಪ್ರದೇಶಗಳಿಗೆ ಕೂಡಲೇ ಸಾಕಷ್ಟು ಪರಿಹಾರವನ್ನೊದಗಿಸುವುದು, ಸಣ್ಣ ಪುಟ್ಟ ನೀರಾವರೀ ಕಾರ್ಯವನ್ನು ತ್ವರಿಗೊಳಿಸುವುದು ಮೊದಲಾದ ಕ್ರಮಗಳನ್ನು ತೆಗೆದುಕೊಳ್ಳಲಿ. ಆಹಾರ ಸಮಸ್ಯೆಯನ್ನು ಪರಿಗಣಿಸಲು ಪಕ್ಷಾತೀತವಾದ ರೀತಿಯಲ್ಲಿ ಎಲ್ಲರ ಸಹಕಾರವನ್ನೂ ಸಲಹೆಗಳನ್ನೂ ಪಡೆದು ಸರಕಾರ ಕ್ರಮ ವಹಿಸಲಿ.

ಭಾರತ—ಪಾಕ್ ಗಡಿ ವಿವಾದ ಪ್ರಶ್ನೆ ಬಗ್ಗೆ ಒಪ್ಪಂದ

ಕಳೆದವಾರ ನವದೆಹಲಿಯಲ್ಲಿ ಪಾಕ್ ಪ್ರಧಾನಿ ಫಿರೋಜಖಾನ್ ನೂನ್ ಮತ್ತು ಭಾರತ ಪ್ರಧಾನಿ ನೆಹರೂರವರೊಡನೆ ಮಾತುಕತೆ ನಡೆದು ಭಾರತ—ಪಾಕೀಸ್ತಾನ ಗಡಿ ಪ್ರಶ್ನೆಯ ಬಗ್ಗೆ ಒಂದು ಒಪ್ಪಂದವಾಗಿದೆ. ಮಾತುಕತೆ ಸೌಹಾರ್ದಯುತವಾದ ವಾತಾವರಣದಲ್ಲಿ ಜರುಗಿ, ನಂತರ ಹೊರಡಿಸಿರುವ ಜಂಟಿ ಪ್ರಕಟಣೆಯಲ್ಲಿ ಗಡಿ ಸಮಸ್ಯೆಯ ಪರಿಹಾರದ ಬಗ್ಗೆ ಒಪ್ಪಂದಕ್ಕೆ ಬಂದಿರುವುದಾಗಿ ತಿಳಿಸಲಾಗಿದೆ.

ಪೂರ್ವ ಪ್ರದೇಶದ ಗಡಿಯಲ್ಲಿರುವ ಅನೇಕ ಗಡಿ ಪ್ರದೇಶದ ಭಾಗಗಳಿಗೆ ಸಂಬಂಧಿಸಿದಂತೆ ಒಪ್ಪಂದವಾಗಿದೆ. ಈ ಒಪ್ಪಂದದ ಪ್ರಕಾರ ಭಾರತದ ಗಡಿಯಲ್ಲಿರುವ ಕೆಲ ಭಾಗಗಳು ಪಾಕೀಸ್ತಾನಕ್ಕೂ, ಪಾಕೀಸ್ತಾನದ ಕೆಲ ಭಾಗಗಳು ಭಾರತಕ್ಕೂ ಹೋಗುತ್ತದೆ.

ಕಳೆದ ತಿಂಗಳಿನಲ್ಲಿ ಗಡಿ ಪ್ರದೇಶದಲ್ಲಿ ಪಾಕೀಸ್ತಾನೀ ಪಡೆಗಳು ಗುಂಡಿನ ಮಳೆ ಸುರಿಸಿ, ಗಡಿ ವಿವಾದ ಪ್ರಶ್ನೆಯನ್ನು ಉತ್ಕಟ ಪರಿಸ್ಥಿತಿಗೆ ತಂದಿರಿಸಿದ್ದು ಎಲ್ಲರಿಗೂ ತಿಳಿದಿದೆ. ಯಾವುದೇ ಸಮಸ್ಯೆಯನ್ನು ಸಂಧಾನದ ಮೂಲಕ ಪರಿಹರಿಸಬೇಕೆಂಬುದು ಭಾರತದ ಧೋರಣೆಯಾಗಿದೆ. ಈ ಧೋರಣೆಯನ್ನನುಸರಿಸಿ ನಡೆದ ಮಾತುಕತೆಯ ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು ಸ್ವಾಗತಾರ್ಹವಾಗಿದೆ. ಪಾಕೀಸ್ತಾನದೊಂದಿಗಿರುವ ಇತರೇ ವಿವಾದಗಳೂ ಸಹ ಇದೇ ರೀತಿಯಲ್ಲಿ ಸಂಧಾನದ ಮೂಲಕ ಇತ್ಯರ್ಥವಾಗಲೆಂದು ಆಶಿಸುತ್ತೇವೆ.

ಪಶ್ಚಿಮ ಬಂಗಾಳದಲ್ಲಿ ಆಹಾರ ಚಳವಳಿ

ಆಹಾರ ಧಾನ್ಯಗಳ ವಿಪರೀತ ಬೆಲೆ ಏರಿಕೆ, ಅಭಾವ ಮತ್ತು ಸರಕಾರದ ಆಹಾರ ನೀತಿಯ ವಿರೋಧವಾಗಿ ಪಶ್ಚಿಮ ಬಂಗಾಳದ ಎಡ ಪಕ್ಷಗಳು ಚಳವಳಿಯನ್ನಾರಂಭಿಸಿದೆ. ಪ್ರಜಾ ಸೋಷಲಿಸ್ಟ್ ಪಕ್ಷ ಮಾತ್ರ ಈ ಚಳವಳಿಯಲ್ಲಿ ಭಾಗವಹಿಸಿಲ್ಲ.

ಪಶ್ಚಿಮ ಬಂಗಾಳದ ಬಿ. ಸಿ. ರಾಯ್ ಸರಕಾರವು ಆಹಾರ ಕ್ಷೇತ್ರದಲ್ಲಿ ತನ್ನ ನೀತಿಯನ್ನು ಬದಲಿಸಬೇಕೆಂದೂ, ಕೂಡಲೇ ಆದಷ್ಟು ಧಾನ್ಯವನ್ನೂ ಸಂಗ್ರಹಿಸಿ ಅಗ್ಗದರದ ಅಂಗಡಿಗಳ ಮೂಲಕ ಕಡಿಮೆ ಬೆಲೆಯಲ್ಲಿ ಹಂಚಬೇಕೆಂದೂ, ಆಹಾರ ಸಚಿವ ಪಿ. ಸಿ. ಸೇನ್‌ರವರನ್ನು ಸಚಿವ ಸ್ಥಾನದಿಂದ ಕಿತ್ತು ಹಾಕಬೇಕೆಂದೂ ಬೇಡಿಕೆಯನ್ನೀಯಲಾಗಿದೆ.

ಆಹಾರ ಸಚಿವ ಪಿ. ಸಿ. ಸೇನ್‌ರವರು ದಾಸ್ತಾನುಗಾರರಿಗೆ ಸಹಾಯ ಮಾಡಿದರೆಂಬ ಗಂಭೀರವಾದ ಆರೋಪವಿದೆ. ಅಷ್ಟೇ ಅಲ್ಲ ಇಂದಿನ ಪರಿಸ್ಥಿತಿಗೆ ಅವರೇ ಹೊಣೆ ಎಂದು ಹೇಳಲಾಗಿದೆ. ಈ ಗಂಭೀರವಾದ ಆರೋಪವನ್ನು ಮಾಜಿ ಸಚಿವ ಸಿದ್ಧಾರ್ಥರೇಯವರು ಮಾಡಿದ್ದರು. ನಂತರದಲ್ಲಿ ಕಾಂಗ್ರೆಸ್ ಶಾಸನ ಸಭಾ ಪಕ್ಷವು ನಿಯಮಿಸಿದ್ದ ತನಿಖಾ ಸಮಿತಿಯು ತನ್ನ ವರದಿಯನ್ನು ಈ ಬಗ್ಗೆ ಇತ್ತಿದೆ. ಸರಕಾರ ಇದನ್ನು ಪ್ರಕಟಿಸಲು ನಿರಾಕರಿಸಿದೆ. ನುಸುಳಿ ಹೊರಬಿದ್ದಿರುವ ವರದಿಗಳಂತೆ ಈ ತನಿಖಾ ಸಮಿತಿಯು ತನ್ನ ವರದಿಯಲ್ಲಿ ಆರೋಪಗಳನ್ನು ರುಜುವಾತು ಮಾಡಿದೆಯೆಂದು ತಿಳಿದು ಬಂದಿದೆ. ಈ ವರದಿಯು ಸರಕಾರದ ನಿಜಸ್ವರೂಪವನ್ನು ಬಯಲಿಗೆಳೆಯುವುದರಿಂದಾಗಿ ಅದನ್ನು ಮುಚ್ಚಿಡಲಾಗಿದೆ.

ಪಶ್ಚಿಮ ಬಂಗಾಳ ಸರಕಾರ ಯಥಾಪ್ರಕಾರ ತನ್ನ ದಬ್ಬಾಳಿಕೆಯ ಸ್ಥಿತಿಯನ್ನನುಸರಿಸಿದೆ. ಈವರೆಗೆ ಸುಮಾರು 600 ಮಂದಿಯ (ಅವರಲ್ಲನೇಕ ಮಹಿಳೆಯರು ಮತ್ತು ಸಣ್ಣ ಮಕ್ಕಳು ಕೂಡ) ಬಂಧನವಾಗಿದೆ.

ವಾರದ ವಾರ್ತಾ ಸಮೀಕ್ಷೆ

ಕೇರಳದ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯ

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ತಮ್ಮ ಇತ್ತೀಚಿನ ಕೇರಳ ಪ್ರವಾಸದ ನಂತರ ತಮ್ಮ ವರದಿಯನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಒಪ್ಪಿಸಿದ್ದಾರೆ. ಕಾರ್ಯಕಾರೀ ಸಮಿತಿಯು ಎರಡು ಘಂಟೆಗಳ ಕಾಲ ಚರ್ಚೆ ನಡೆಸಿ ಒಂದು ನಿರ್ಣಯವನ್ನೂ ಅನುಮೋದಿಸಿದೆ. ನಿರ್ಣಯದಲ್ಲಿ ಹಳೆಯ ಹಾಡನ್ನೇ ಮತ್ತೆ ತಿರುವಿಹಾಕಲಾಗಿದೆ. ಕಮ್ಯೂನಿಸ್ಟರ ಧಾಳಿಯನ್ನು ತಡೆಯಲು ಕಾಂಗ್ರೆಸ್ಸು ಸರಿಯಾದ ಧೋರಣೆ ರೂಪಿಸಬೇಕೆಂದು ತಿಳಿಸಲಾಗಿದೆ. ಸಮಿತಿಯ ಸಭೆಯಲ್ಲಿ ಗೃಹ ಸಚಿವ ಪಂತ್ ಮತ್ತು ನೆಹರೂರವರು ಇದ್ದಾರೆಂದು ವರದಿಯು ತಿಳಿಸುತ್ತದೆ.

ಕೇರಳ ಪರಿಸ್ಥಿತಿಯನ್ನು ಕುರಿತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯ ಯಾವ ರೀತಿಯಲ್ಲಿಯೂ ಹೊಸತಲ್ಲ. ಮೊದಲಿನಿಂದಲೂ ಕೆಲ ಪ್ರಮುಖ ಕಾಂಗ್ರೆಸ್ ನಾಯಕರುಗಳು ಕೇರಳದಲ್ಲಿ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಸರಕಾರಕ್ಕೆ ವಿರೋಧವಿದ್ದಾರೆ.

ಕಾರ್ಯಕಾರೀ ಸಮಿತಿಯ ನಿರ್ಣಯವು ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಸರಕಾರವನ್ನು ಮತ್ತು ಕಮ್ಯೂನಿಸ್ಟ್ ಪಾರ್ಟಿಯನ್ನು ಕೇರಳದಲ್ಲಿನ ಘಟನೆಗಳ ಬಗ್ಗೆ ಖಂಡಿಸುತ್ತದೆಯೇ ಹೊರತು, ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಚಟುವಟಿಕೆ ಮತ್ತು ಧೋರಣೆಯ ಬಗ್ಗೆ ಚಕಾರವೆತ್ತುವುದಿಲ್ಲ. ಇದು ಅಖಿಲ ಭಾರತ ಕಾಂಗ್ರೆಸ್ ನಾಯಕತ್ವದ 'ಪ್ರಜಾಪ್ರಭುತ್ವ' ಧೋರಣೆಯನ್ನು ಚೆನ್ನಾಗಿ ವ್ಯಕ್ತಗೊಳಿಸುತ್ತದೆ.

(೯ನೇ ಪುಟ ನೋಡಿ)

ಕೇರಳ........ ★

ಇದೆಂಥ ಪ್ರಜಾಪ್ರಭುತ್ವದ ರಕ್ಷಣೆ ?

ಕೇರಳದಲ್ಲಿ ‘ಪ್ರಜಾಪ್ರಭುತ್ವ’ವನ್ನು ರಕ್ಷಿಸಲು ಪಿ. ಯಸ್. ಪಿ. ಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಹೋರಾಟಕ್ಕೆ ಕರೆಕೊಟ್ಟಿದೆ. ಇದರಲ್ಲಿ ಹೊಸತೇನೂ ಇಲ್ಲ. ಕಳೆದ ಹದಿನಾರು ತಿಂಗಳುಗಳಿಂದ ಕೇರಳದ ಪ್ರತಿಪಕ್ಷಗಳೆಲ್ಲ ಜಗಿದು ಬಗಿದು ಉಗುಳಿರುವುದನ್ನೇ ಪಿ. ಯಸ್. ಪಿ.ಯ ಮಹಾನಾಯಕರು ಈಗ ಮೆಲುಕಾಡಿದ್ದಾರೆ. ಆದರೆ ಅದನ್ನು ಅಲಕ್ಷಿಸುವಂತಿಲ್ಲ.

ಪಿ. ಯಸ್. ಪಿ. ಹೇಳುವುದು ಸರಿಯಲ್ಲವೆ? ಪ್ರಜಾಪ್ರಭುತ್ವವನ್ನು ಸಂರಕ್ಷಿಸುವ ಭಾರ ಹೊತ್ತಿರುವ ಪೋಲೀಸಿನವರು, ಅವರ ಮುಖ್ಯ ಆಯುಧಗಳಿಂದ ಲಾಠಿ–ಬಂದೂಕಗಳನ್ನು ಜನರ ಮೇಲೆ ಪ್ರಯೋಗಿಸಬಾರದು ಎಂದು ವಿಧಿಸಿದರೆ ಮತ್ತೆ ಆ ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಉಳಿಗಾಲ ಇರುವುದೇ? ಜಮೀನ್ದಾರರ ಮತ್ತು ಬಂಡವಾಳಗಾರರ ಪಟ್ಟಭದ್ರಹಿತಗಳನ್ನು ಕಾಯುವುದಕ್ಕೆ ಪೋಲೀಸಿನವರ ಸಹಾಯ ಸಿಗುವುದಿಲ್ಲ ಎಂದ ಮೇಲೆ ಪ್ರಜಾಪ್ರಭುತ್ವ ಉಳಿಯುವುದೆ? ಕಾರ್ಮಿಕರಿಗೆ ಯೋಗ್ಯ ಕನಿಷ್ಟವೇತನ ನಿರ್ಣಯ ಮಾಡುವುದಲ್ಲದೆ, ಅದನ್ನು ಕೊಡಬೇಕೆಂದು ಮಾಲಿಕನನ್ನು ಒತ್ತಾಯ ಮಾಡುವ (ಕಾನೂನಿನಲ್ಲಿರುವ ಕಾರ್ಮಿಕರ ಹಕ್ಕುಗಳನ್ನು ಒಪ್ಪದಿರುವ ಮಾಲಿಕರಿಗೆ ಪೋಲೀಸಿನವರ ಬೆಂಬಲ ಸಿಗದಂತೆ ಮಾಡಿರುವ) ಸರಕಾರ ಇರುವಲ್ಲಿ ಪ್ರಜಾಪ್ರಭುತ್ವ ಬಾಳುವುದೆ? ರೈತರನ್ನು ಒಕ್ಕಲೆಬ್ಬಿಸುವ ಜಮೀನ್ದಾರರ ಪವಿತ್ರವಾದ ಮತ್ತು ಪರಂಪರಾಗತವಾದ ಹಕ್ಕನ್ನು (ಎಲ್ಲ ರಾಜ್ಯಗಳೂ ಕಾರ್ಯತಃ ನಡೆಯುಗೊಡುವುದನ್ನು) ನಿಷೇಧಿಸಿರುವಲ್ಲಿ ಪ್ರಜಾಪ್ರಭುತ್ವ ಬದುಕುವುದೆ? ಜಮೀನಿನ ಹಿಡುವಳಿಗೊಂದು ಪರಮಾವಧಿ ಪರಿಮಿತಿಯನ್ನು ನಿರ್ಣಯಮಾಡಿ, ಅದಕ್ಕಿಂತ ಹೆಚ್ಚಿಗೆ ಜಮೀನು ಸ್ವಾಧೀನವಿರುವವರಿಂದ ಅದನ್ನು ತೆಗೆದು ಜಮೀನಿಲ್ಲದ ರೈತರಿಗೆ ಹಂಚಿಕೊಡುವ ವ್ಯವಸ್ಥೆ ಮಾಡುತ್ತಿರುವ ಸರಕಾರ ಪ್ರಜಾಪ್ರಭುತ್ವದ ಬೇರನ್ನೇ ಕತ್ತರಿಸುವ ಸರಕಾರವಲ್ಲವೆ? ಅಧಿಕಾರಿಗಳ ಕೈಯಲ್ಲಿ ಕೇಂದ್ರೀಕೃತವಾಗಿರುವ ಅಧಿಕಾರಗಳನ್ನು ವಿಕೇಂದ್ರೀಕರಣ ಮಾಡುವ ನೆಪದಲ್ಲಿ ಜನರಿಂದ ಚುನಾಯಿಸಲ್ಪಡುವ ಪಂಚಾಯತುಗಳಿಗೂ ತಾಲ್ಲೂಕು–ಜಿಲ್ಲಾ ಮಂಡಲಗಳಿಗೂ ಹೆಚ್ಚು ಅಧಿಕಾರಗಳನ್ನು ಕೊಡುವ ಆಡಳಿತ ಸುಧಾರಣೆ ಎಂದರೆ ಪ್ರಜಾಪ್ರಭುತ್ವದ ಬುನಾದಿಯನ್ನೇ ಒಡೆದು ಹಾಕುವುದೆಂದೇ ಅರ್ಥವಲ್ಲವೆ? ಇಂಥ ಕಾರ್ಯಕ್ರಮಗಳನ್ನು ನಡೆಯಗೊಟ್ಟರೆ ಕೇರಳದಲ್ಲಿ ಮಾತ್ರವಲ್ಲ, ಭಾರತದಲ್ಲೆಲ್ಲ ಪ್ರಜಾಪ್ರಭುತ್ವ ನಿರ್ಮೂಲವಾಗದೆ ಉಳಿಯುವುದೆ?

ಎಷ್ಟು ಮಾತ್ರಕ್ಕೂ ಉಳಿಯಲಾರದು! ಆದುದರಿಂದ ಕೇರಳದಲ್ಲಿ ಪ್ರಜಾಪ್ರಭುತ್ವ ಸಂರಕ್ಷಿಸುವ ಹೋರಾಟವನ್ನು ಸಂಘಟಿಸಬೇಕು, ಅದಕ್ಕೆ ಪಿ. ಯಸ್. ಪಿ. ನಾಯಕತ್ವ ವಹಿಸಬೇಕು!

ಆದರೆ ನಾಯಕತ್ವದ ವಿಷಯದಲ್ಲಿ ಕೆಲವು ತಕರಾರುಗಳಿವೆ. ಅದು ಕಾಂಗ್ರೆಸಿನ ಜನ್ಮಸಿದ್ಧ ಹಕ್ಕು ಎಂದು ದಾಮೋದರ ಮೇನನ್‌ರಿಂದ ಹಿಡಿದು ಪನಂಪಳ್ಳಿಯವರ ವರೆಗಿನ ಕಾಂಗ್ರೆಸ್ಸಿಗರ (ಅವರೊಳಗೆ ಯಾರದೆಂದು ಚರ್ಚೆ ಬಾಕಿಯಿದೆಯಾದರೂ) ಖಚಿತ ಅಭಿಪ್ರಾಯವಾಗಿದೆ. ಅವರಿಗಿಂತಲೂ ಮೊದಲೇ ಕೆಥೋಲಿಕ್ ಗುರುಗಳು ಹೋರಾಟದ ಮೂಗುದಾರ ಹಿಡಿದಿದ್ದಾರೆ. ಇವರ ಫಾದರ್ (ತಂದೆ) ವಡಕ್ಕನ್ ಎಲ್ಲರನ್ನು ತನ್ನ ನೇತೃತ್ವದಲ್ಲಿ ಸೇರಿಸಿ 5 ಲಕ್ಷ ಸ್ವಯಂ ಸೇವಕರ ‘ಶಾಂತಿ ಸೇನೆ’ ಕಟ್ಟುವ ಮಹತ್ಕಾರ್ಯ ತೊಡಗಿದ್ದಾರೆ. ಅವರ ಜೊತೆಯಲ್ಲಿ ಅಚ್ಚ ಪ್ರಜಾಪ್ರಭುತ್ವವಾದೀ (ಕೇರಳದಲ್ಲಿ ಮಾತ್ರ) ಮುಸ್ಲಿಂ ಲೀಗು ಸೇರಿಕೊಂಡಿದೆಯಲ್ಲದೆ ಜನಸಂಘವೂ ಒಂದು ಗೂಡಿದೆ! ಪ್ರಜಾಪ್ರಭುತ್ವದ ರಕ್ಷಣೆಗೆ ಇಂಥ ಆದರ್ಶ ಐಕ್ಯರಂಗ ಬೇರೆ ಎಲ್ಲಿಯಾದರೂ ಇದೆಯೆ? ಇರಲು ಸಾಧ್ಯವೆ? ಪಿ. ಯಸ್. ಪಿ ಯ ನಾಯಕರಿಗೆ ಇಂಥವರೇ ನಿಜವಾದ ಬಂಧುಮಿತ್ರರು.

ಜನರಿಂದ ಚುನಾಯಿಸಲ್ಪಟ್ಟ ಮತ್ತು ಜನರ ಹಿತವನ್ನು ಸಾಧಿಸುತ್ತಿರುವ ಸರಕಾರವನ್ನು ಈ ‘ಪ್ರಜಾಪ್ರಭುತ್ವ ಸಂರಕ್ಷಕರ’ 5 ಲಕ್ಷದ ‘ಶಾಂತಿ ಸೇನೆ’ಯ ಬಲದಿಂದ ಉರುಳಿಸುವಂಥ ಧರ್ಮಯುದ್ಧಕ್ಕೆ ಪಿ. ಯಸ್. ಪಿ. ಟೊಂಕಬಿಗಿದಿದೆ. ಅಧ್ಯಕ್ಷರ ಆಳ್ವಿಕೆಯನ್ನು ಅವರು ಅಪೇಕ್ಷಿಸುವುದಿಲ್ಲ ಯಾಕೆಂದರೆ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸಿದ ನಂತರ, ಮುಖ್ಯ ಮಂತ್ರಿಯಾಗಲೆಂದೇ ಅವತರಿಸಿರುವ ಪಟ್ಟಂಥಾನು (ಪಟ್ಟ ತಾನು?) ಪಿಳ್ಳೆಯವರಿದ್ದಾರೆ–ಅಧಿಕಾರ ವಹಿಸಿಕೊಳ್ಳುವುದಕ್ಕೆ ಸಿದ್ಧರಾಗಿ!

ಒಂದೇ ಒಂದು ತೊಂದರೆ—ಕೇರಳದ ಜನ ಇವರ ‘ಪ್ರಜಾಪ್ರಭುತ್ವ’ವನ್ನು ಅನುಭವಿಸಿ ಬಿಟ್ಟಿದ್ದಾರೆ; ಇವರ ‘ಪ್ರಜಾಪ್ರಭುತ್ವ ಸಂರಕ್ಷಣೆಯ ಹೋರಾಟ’ಗಳನ್ನೂ ಕಣ್ಣಾರೆ ಕಂಡು ತಿಳಿದುಕೊಂಡಿದ್ದಾರೆ. ಆದರೆ ಕಾಂಗ್ರೆಸ್, ಮುಸ್ಲಿಂ ಲೀಗ್, ಜನಸಂಘ, ಕೆಥೋಲಿಕ್ ಪಾದ್ರಿಗಳು, ಭೂಮಾಲಿಕರು, ತೋಟದ ದೊರೆಗಳು, ಬಂಡವಾಳಗಾರರು, ಕೇಂದ್ರದ ಪ್ರಭುಗಳು....... ಮೊದಲಾದವರೆಲ್ಲ ಪಿ. ಯಸ್. ಪಿ.ಯ ಹಿಂದೆ (ಅಥವ ಸುತ್ತುಮುತ್ತಲೂ) ಇರುವಾಗ ಅವರಿಗೆ ಭಯವೇನು? ನೀವೇ ಹೇಳಿ!

ಕೆಲಸ ಬಿಟ್ಟು ಕೇರಳಕ್ಕೆ

ಭಾರತದ ಸರಹದ್ದುಗಳನ್ನು ಪಾಕಿಸ್ಥಾನದ ಸಶಸ್ತ್ರ ಪಡೆಗಳು ಮೇಲಿಂದ ಮೇಲೆ ಉಲ್ಲಂಘಿಸುತ್ತಿರುವುದು, ಗಡಿಗಳಲ್ಲಿ ಆಗಾಗ ಘರ್ಷಣೆಗಳಾಗುತ್ತಿರುವುದು, ಈ ಎರಡು ನೆರೆಹೊರೆಯ ದೇಶಗಳ ಸಂಬಂಧದ ಪ್ರಶ್ನೆಯನ್ನಷ್ಟೇ ಅಲ್ಲದೆ ನಮ್ಮ ನಾಡಿನ ಭದ್ರತೆಯ ಮತ್ತು ರಕ್ಷಣೆಯ ಪ್ರಶ್ನೆಯನ್ನೂ ಗಂಭೀರಗೊಳಿಸಿರುತ್ತದೆ. ಮಧ್ಯಪ್ರದೇಶದ ಧಣಾಯಿತರ ಕೈಯಿಂದ ಅಮೇರಿಕದಲ್ಲಿ ತಯಾರಿಸಲ್ಪಟ್ಟ ಬಂದೂಕುಗಳು ದೊರೆತಿರುವುದನ್ನು ನೋಡಿದರೆ, ಪಾಕಿಸ್ಥಾನದ ಮುಖಾಂತರ ಅಮೇರಿಕದ ಆಯುಧಗಳು ನಮ್ಮ ದೇಶದೊಳಗೂ ಹರಿದು ಬಂದು ಅಪಾಯವನ್ನು ಉಂಟುಮಾಡುತ್ತಿದೆ ಎಂದು ತಿಳಿಯುವುದು.

ಈ ಹಿನ್ನೆಲೆಯಲ್ಲಿ ಭಾರತದ ಮತ್ತು ಪಾಕಿಸ್ಥಾನದ ಕಾರ್ಯದರ್ಶಿಗಳೊಳಗೆ ಕರಾಚಿಯಲ್ಲಿ ಮಾತುಕತೆ ನಡೆದು ಕೈದಿಗಳ ಹಸ್ತಾಂತರದ ಬಗ್ಗೆಯೂ ಗಡಿ ವಿವಾದಗಳ ಪರಿಹಾರದ ಬಗ್ಗೆಯೂ ಕೆಲವೊಂದು ನಿರ್ಣಯಗಳಾಗಿವೆ. ಈ ಎರಡು ದೇಶಗಳ ಪ್ರಧಾನಿಗಳು ಬೇಗನೆ ಡಿಲ್ಲಿಯಲ್ಲಿ ಭೇಟಿಯಾಗಿ ಈ ಸಮಸ್ಯೆಗಳನ್ನು ಕುರಿತು ಸಮಾಲೋಚನೆ ನಡೆಸಲಿದ್ದಾರೆ. ಈ ಮಾತುಕತೆಗಳು ಫಲಕಾರಿಯಾಗುವುದು ಎರಡೂ ದೇಶಗಳ ಸ್ವಾತಂತ್ರ್ಯ, ಸೌಹಾರ್ದತೆ ಮತ್ತು ಪುರೋಗಮನಕ್ಕೆ ಬಹಳ ಅಗತ್ಯವಿದೆ.

ಲೆಬನಾನ್‌ನಿಂದಲೂ ಜೋರ್ಡಾನ್‌ನಿಂದಲೂ ಅಮೇರಿಕದ ಮತ್ತು ಬ್ರಿಟನ್‌ನ ಸೇನೆಗಳು “ಬೇಗನೆ ಹಿಂತೆಗೆಯಲ್ಪಡಲು ಪ್ರಾಯೋಗಿಕ ಏರ್ಪಾಡುಗಳನ್ನು ಮಾಡುವ” ಬಗ್ಗೆ ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯವರು ಅರಬ್ ರಾಷ್ಟ್ರಗಳ ಅಧಿಪತಿಗಳೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ. ಅಣು ಆಯುಧಗಳ ಪರೀಕ್ಷಾರ್ಥ ಸ್ಫೋಟನವನ್ನು ಸೋವಿಯತ್ ಯೂನಿಯನಿನಂತೆಯೇ ಅಮೇರಿಕ ಮತ್ತು ಬ್ರಿಟನ್ ಕೂಡ ನಿಲ್ಲಿಸುವ ಮತ್ತು ಅದರ ಸಂಪೂರ್ಣ ನಿಷೇಧವನ್ನು ಸಾಧಿಸುವ ಸನ್ನಿವೇಶ ಉಂಟಾಗಿದೆ. ಇದರಿಂದ ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಒಂದಿಷ್ಟು ಸುಧಾರಿಸಿದೆ. ಆದರೆ ಅದೇ ಸಮಯದಲ್ಲಿ ಅಮೇರಿಕ ಮತ್ತದರ ಕೈಗೊಂಬೆಗಳು ನಮ್ಮ ನೆರೆಹೊರೆಯಲ್ಲೇ ಇನ್ನೊಂದು ಘೋರ ಘರ್ಷಣೆ ಆರಂಭಿಸುವ ಅಪಾಯ ತಲೆದೋರಿದೆ.

ಚೀನದ ಭದ್ರತೆಗೂ ರಕ್ಷಣೆಗೂ ಅವಶ್ಯವಾಗಿ, ಚೀನದ ಪರಮಾಧಿಕಾರಕ್ಕೆ ಒಳಪಟ್ಟ ಕ್ವಿಮೋಯ್, ಮಟ್ಸು ಮುಂತಾದ ದ್ವೀಪಗಳಿಂದ ಕೊಮಿಂಟಾಂಗ್ ಸೈನ್ಯಗಳನ್ನು ಹಿಂದಕ್ಕೆ ಅಟ್ಟಲು ಜನತಾ ಚೀನ ಕ್ರಮವಹಿಸಿದೆ. ಅಮೇರಿಕ ಅದರಲ್ಲಿ ಅಕ್ರಮವಾಗಿ ಪ್ರವೇಶಿಸುವುದರಲ್ಲಿದೆ. ಇದನ್ನು ಏಷ್ಯಾ—ಆಫ್ರಿಕಾ ದೇಶಗಳು ಖಂಡಿಸಿವೆ. ಅಮೇರಿಕದ ವರ್ತನೆಯು ಚೀನದ ಮೇಲೆ ಆಕ್ರಮಣವೆಂದು ಸಂಯುಕ್ತ ಅರಬ್ ರಾಷ್ಟ್ರದ ಅಧ್ಯಕ್ಷ ನಾಸೆರ್ ಬಹಿರಂಗವಾಗಿ ಸಾರಿದ್ದಾರೆ. ನಮ್ಮ ನೆರೆಹೊರೆಯ ಈ ಸಮಸ್ಯೆಯನ್ನು ಕುರಿತು ಭಾರತ ಸರಕಾರವಿನ್ನೂ ಬಾಯಿಬಿಟ್ಟಿಲ್ಲ.

ಇಂಥ ಸಂದರ್ಭದಲ್ಲಿ ನಮ್ಮ ದೇಶದ ರಕ್ಷಣಾ ಸಚಿವ ಶ್ರೀ ವಿ. ಕೆ. ಕೃಷ್ಣ ಮೆನನ್ ತನ್ನ ಸಂಪೂರ್ಣ ಗಮನವನ್ನು ಈ ಸಸಮಸ್ಯೆಗಳಿಗೆ ಕೊಡಬೇಕಾಗಿದೆ. ಅದು ಅವರ ಕರ್ತವ್ಯ. ಆದರೆ ಶ್ರೀ ಮೆನೋನರು ಅದನ್ನೆಲ್ಲ ಬಿಟ್ಟು, ಕೇರಳಕ್ಕೆ ಹೋಗಿದ್ದಾರೆ. ಅಲ್ಲಿ ಸುತ್ತಾಡಿ ಅದೇನೋ ‘ಪರಿಶೀಲನಾ’ ನಡೆಸುವ ಕಾರ್ಯ ಕೈಗೊಂಡಿದ್ದಾರೆ!

ಅದೇನು ‘ಪರಿಶೀಲನೆ’? ವಿಚಾರಣೆ ನಡೆಸಬೇಕಾಗಿರುವ ವಿಷಯಕ್ಕೆಲ್ಲ ಕೇರಳ ಸರಕಾರವೇ ನ್ಯಾಯಾಧೀಶರುಗಳ ನಿಷ್ಪಕ್ಷ ಮತ್ತು ಬಹಿರಂಗ ವಿಚಾರಣೆಗೆ ಏರ್ಪಾಡು ಮಾಡಿದೆ. ಕಾಂಗ್ರೆಸ್ ಅಧ್ಯಕ್ಷ ಢೇಬರ್ ಅವರ ಪಕ್ಷದ ಪರವಿಯಿಂದ ಅದೇನೋ ತಿದಕಿ ನೋಡುವ, ಬಣ್ಣ ಬಳಿಯುವ, ಕೆಲಸ ತೊಡಗಿದ್ದಾರೆ. ಕೇಂದ್ರದ ಮಂತ್ರಿಗಳ ಪ್ರತ್ಯೇಕ ‘ಪರಿಶೀಲನೆ’ ಏನದು? ಆಹಾರದ ಪರಿಸ್ಥಿತಿ, ನೈಸರ್ಗಿಕ ಅನಾಹುತಗಳಿಂದಾದ ನಷ್ಟ, ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾರ್ಯ ಮುಂತಾದುವುಗಳನ್ನು ಪ್ರತ್ಯಕ್ಷವಾಗಿ ನೋಡಿ ರಾಜ್ಯ ಸರಕಾರಕ್ಕೇನಾದರೂ ಹೆಚ್ಚು ಸಹಾಯ ನೀಡುವುದರ ಬಗ್ಗೆ ಈ ಪರಿಶೀಲನೆಯೋ? ಅಲ್ಲ. ಕೇರಳ ಸರಕಾರದ ಕುರಿತು ಪ್ರತಿಪಕ್ಷಗಳು ಹೊರಿಸಿರುವ ಕೆಲವು ನಿರಾಧಾರವಾದ ಆರೋಪಣೆಗಳ ಕುರಿತು ಈ ‘ಪರಿಶೀಲನೆ’ ನಡೆಯುತ್ತಿದೆ. ಇದು ಘಟನಾತ್ಮಕವಲ್ಲ. ಇದು ಸ್ವಜನಪಕ್ಷಪಾತತನವಾಗಿದೆ. ಇದು ಅಕ್ರಮ ಅನ್ಯಾಯ ಎಂದು ಕೇಂದ್ರ ಸರಕಾರಕ್ಕೆ ನಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತೇವೆ.

ರೆವಿನ್ಯೂ ಬೋರ್ಡ್‌ಗಳ ರದ್ದಿಯಾತಿ

ಕೇರಳ ಸರಕಾರವು ನಿಯಮಿಸಿದ್ದ ಆಡಳಿತ ಸುಧಾರಣಾ ಸಮಿತಿಯು ರೆವಿನ್ಯೂ ಬೋರ್ಡುಗಳ ರದ್ದಿಯಾತಿಗೆ ಶಿಫಾರ್ಸು ಮಾಡಬಹುದಾಗಿದೆ. ಸರಕಾರದ ದಿನನಿತ್ಯದ ಆಡಳಿತದ ಮೇಲೂ ಸೆಕ್ರೆಟೆರಿಯೆಟ್ ಮೇಲೂ ವರಿಷ್ಠಾಧಿಕಾರದ ಮುಸುಕನ್ನೆಳೆವ ಈ ರೆವಿನ್ಯೂ ಬೋರ್ಡನ್ನು ಸರಕಾರದ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯದ ಕಾರ್ಯದರ್ಶಿಗಳಲ್ಲಿ ಎರಡು ಭಾಗವಾಗಿ ಹಂಚಿಬಿಡಬಹುದಾಗಿದೆ. ಅಭಿವೃದ್ಧಿ ಕಾರ್ಯಗಳನ್ನು ನಿರ್ದೇಶಿಸಲು ಮತ್ತು ಹೆಚ್ಚು ಚುರುಕಾಗಿಸಲು ಕಮಿಷನರ್‌ರೊಬ್ಬರ ನೇಮಕದ ವಿಶೇಷವೂ ಈ ಸಮಿತಿಯ ವರದಿಯಲ್ಲಿರಬಹುದಾಗಿ ತಿಳಿದಿದೆ.

ಈ ವರದಿಯು ಎರಡು ಭಾಗಗಳಲ್ಲಿದ್ದು ಒಂದು ಭಾಗದಲ್ಲಿ ಆಡಳಿತ ಸಮಸ್ಯೆಗಳ ಬಗ್ಗೆಯೂ ಇನ್ನೊಂದು ಭಾಗದಲ್ಲಿ ಸರಕಾರದ ಕೆಲಸಗಳ ಬಗ್ಗೆಯೂ ವಿಚಾರಿಸಲಾಗಿದೆ. ಮೊದಲನೆಯ ಭಾಗವು ಇಷ್ಟರಲ್ಲೇ ಪ್ರಕಟವಾಗಲಿದೆ.

ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರ

ರಾಜ್ಯದ ಬುಡದಲ್ಲಿರುವ ಗ್ರಾಮ ಪಂಚಾಯಿತಿಗಳೇ ಪ್ರಜಾಪ್ರಭುತ್ವದ ಪ್ರಮುಖ ಅಂಗವಾಗಬೇಕೆಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿಗಳಿಗೆ ವಿಶೇಷ ಅಧಿಕಾರಗಳನ್ನು ಶಿಫಾರ್ಸು ಮಾಡಿರುವುದು ಈ ವರದಿಯ ಮಹತ್ವದ ಶಿಫಾರಸಾಗಿದೆ.

ಹಳ್ಳಿಗಾಡಿನಲ್ಲಿಯ ಅಭಿವೃದ್ಧಿ ಕಾರ್ಯಗಳ ಜವಾಬ್ದಾರಿಯನ್ನು ನಿರ್ವಹಿಸಲು ಮತ್ತು ಪಂಚಾಯಿತಿಯ ಕಾರ್ಯಗಳನ್ನು ಸಮರ್ಥ ರೀತಿಯಲ್ಲಿ ನಡೆಸಲು ಹಣಕಾಸಿನ ಅಧಿಕಾರಗಳನ್ನು ಪಂಚಾಯಿತಿಗಳಿಗೆ ವಿಶೇಷವಾಗಿ ಕೊಡಲಾಗುವುದು.

o o o

ಕೇರಳ ಸರ್ಕಾರವು ಪ್ರಥಮ ಮತ್ತು ದ್ವಿತೀಯ ದರ್ಜೆಯ ಬ್ಲಾಕ್‌ಗಳಿಗೆ ಯೋಜನಾ ಅಂದಾಜನ್ನೊಪ್ಪಿಸುವ ಅಜ್ಞೆಯನ್ನು ಮಾಡಿದ್ದು ಸ್ಥಳೀಯ ಸ್ಥಿತಿಗತಿ ಮತ್ತು ಅಗತ್ಯಗಳಿಗನುಸರಿಸಿ ಈ ಹಣವನ್ನು

(೬ನೇ ಪುಟ ನೋಡಿ)

ವಿಯಟ್ನಾಮಿ ಕತೆ

ದೇವಯೋಧ ಗಿಯಾಂಗ್

ಅನುವಾದ: ಕೃಷ್ಣಮೂರ್ತಿ ಕರ್ಪೂರ್

ಆರನೆಯ ಹೂಂಗ್ ವೋಂಗ್ ಅರಸು ಆಳುತ್ತಿದ್ದ ಕಾಲವದು. ಉತ್ತರ ವ್ಹಿಯತ್ನಾಮಿನ ವೂಮಿನ್ಹ್ ಜಿಲ್ಲೆಯ ಒಂದು ಸಣ್ಣ ಹಳ್ಳಿ. ಆ ಹಳ್ಳಿಯಲ್ಲಿ ಓರ್ವ ವಯಸ್ಸಾದ ಕಾರ್ಮಿಕ ಸ್ತ್ರೀ ವಾಸಿಸುತ್ತಿದ್ದಳು.

ಅವಳು ಎಂದಿನಂತೆ ಆ ದಿನವೂ ಕಟ್ಟಿಗೆ ಆರಿಸಲು ಕಾಡಿಗೆ ಹೋದಳು. ಕಟ್ಟಿಗೆ ಆರಿಸುತ್ತ ಆರಿಸುತ್ತ ಗುಡ್ಡದ ತಲೆಯ ಮೇಲೆ ಬಂದಳು. ಆಗ ಅಲ್ಲಿ ಅವಳೊಂದು ದೊಡ್ಡದಾದ ಹೆಜ್ಜೆಯ ಗುರುತನ್ನು ಕಂಡಳು. ಆಶ್ಚರ್ಯವಾಯಿತವಳಿಗೆ. ಮಣ್ಣಿನ ಮೇಲೆ ಮೂಡಿದಡಿಯನ್ನು ಅಳತೆ ಮಾಡಿ ನೋಡಬೇಕೆಂಬ ಕುತೂಹಲದಿಂದ ಆವಳು ತನ್ನ ಅಡಿಯನ್ನು ಅದರ ಮೇಲಿರಿಸಿದಳು. ಆ ಕ್ಷಣದಲ್ಲಿಯೇ ಗರ್ಭಿಣಿಯಾದುದು ಅವಳಿಗೆ ತಿಳಿಯ ಬಂತು!

ನವಮಾಸ ತುಂಬಿದ ಹತ್ತು ದಿನಗಳಿಗೆ ಅವಳು ಒಂದು ಸುಂದರ ಮಗುವಿಗೆ ಜನ್ಮವಿತ್ತಳು. ಮಗುವು ಎಂದೂ ಅಳಲಿಲ್ಲ ಮತ್ತು ನಗಲಿಲ್ಲ. ಮೂರು ವರ್ಷಗಳು ತುಂಬುವ ವರೆಗೆ ಮಾತನಾಡದೆ ಹಾಗೆ ಮಲಗಿದಲ್ಲಿಯೇ ಮಲಗಿತ್ತು. ಪ್ರತಿ ದಿನವೂ ತನ್ನ ಉದ್ಯೋಗಕ್ಕೆ ಹೋಗುವ ಮುನ್ನ ಅವಳು ಮಗುವನ್ನು ತೂಗು ಮಂಚದ ಮೇಲೆ ಮಲಗಿಸಿ ನಂತರ ಕೆಲಸಕ್ಕೆ ಹೋಗುತ್ತಿದ್ದಳು. ಆದ್ದರಿಂದ ಮಗುವಿನ ಹೆಸರು 'ಗಿಯಾಂಗ್' ಎಂದು ರೂಢವಾಯ್ತು. ('ಗಿಯಾಂಗ್' ಎಂದರೆ ವ್ಹಿಯತ್ನಾಮಿಗಳ ಭಾಷೆಯಲ್ಲಿ ತೊಟ್ಟಿಲು ಇಲ್ಲವೆ ವಸ್ತುಗಳನ್ನು ತೂಗು ಬಿಡಲು ಉಪಯೋಗಿಸುವ ಹಗ್ಗವೆಂದು.)

ಹೀಗಿರುತ್ತಿರಲು, 'ಆನ್' ಎಂಬ ವೈರಿಗಳು ವ್ಹಿಯತ್ನಾಮಿನ ಮೇಲೆ ಧಾಳಿ ಎತ್ತಿ ಬಂದರು. ದಾರಿಯಲ್ಲಿ ಕಂಡವರ ಕೊಲೆ ಮಾಡಿದರು. ಹಳ್ಳಿ ಪಟ್ಟಣಗಳನ್ನು ಸುಲಿದು ಕೊಳ್ಳೆ ಹೊಡೆದರು. ಅರಸನ ಸೈನ್ಯವು ವೈರಿಗಳ ಹೊಡೆತಕ್ಕೆ ತತ್ತರಿಸಿತು. ಎದುರು ಬೀಳಲಿಕ್ಕಾಗದೆ ದಿಕ್ಕಾಪಾಲಾಗಿ ಓಡಿತು. ಅರಸು ಹೂಂಗ್-ವೋಂಗ್ ತನ್ನ ಸೈನ್ಯಾಧಿಕಾರಿಗಳನ್ನು ಕರೆದು ರಾಜ್ಯದಲ್ಲಿ ಎಲ್ಲಿಯಾದರೂ, ರಾಜ್ಯಕ್ಕೆ ಬಂದೊದಗಿರುವ ಈ ಗಂಡಾಂತರದಿಂದ ಪಾರು ಮಾಡುವಂಥ ಬುದ್ಧಿವಂತ ಹಾಗೂ ಚಾಣಾಕ್ಷ ಯೋಧರಿದ್ದರೆ ಅವರನ್ನು ಹುಡುಕಿ ಕೂಡಲೇ ಕರೆತರಬೇಕೆಂದು ಆಜ್ಞೆ ಮಾಡಿ ನಾಲ್ಕು ದಿಕ್ಕಿಗೂ ಅವರನ್ನು ಕಳಿಸಿಕೊಟ್ಟನು.

ಗಿಯಾಂಗನು ಮತ್ತು ಅವನ ತಾಯಿಯು ವಾಸವಾಗಿದ್ದ ಹಳ್ಳಿಗೆ ಒಂದು ದಿನ ಒಬ್ಬ ಸೈನ್ಯಾಧಿಕಾರಿಯು ಬಂದನು. ಅವನು ರಾಜ ಡಂಗುರ ಸಾರಿದನು. ಆ ಡಂಗುರ ಕೇಳಿದ ಗಿಯಾಂಗನ ತಾಯಿ ಮಮತೆಯಿಂದ ಮಗನ ಬೆನ್ನು ಮೆಲ್ಲಗೆ ತಟ್ಟಿದಳು:

"ಮುದ್ದು ಕಂದ ನನ್ನ ಪುಟ್ಟ ಚಿನ್ನ! ವೈರಿಗಳೊಡನೆ ಕಾದುವ ಕಲಿಭೀಮ ನೀನೆಂದಾಗುವಿ?" ಎಂದು ವಿನೋದವಾಗಿಯೆ ಕೇಳಿದಳು.

ಮಗು ಆವಳ ಪ್ರಶ್ನೆಗೆ ಉತ್ತರ ರೂಪವಾಗಿ ನಕ್ಕಿತು. ಅವಳಿಗೆ ಆಗ ನಂಬಿಕೆಯಾಗಲಿಲ್ಲ. ತನ್ನ ಕಣ್ಣುಗಳು ತನಗೆ ಮೋಸ ಮಾಡುತ್ತಿರಬಹುದೆಂದೆನಿಸಿತವಳಿಗೆ. ಆದರೆ ಮಗು ಚಣ ಮಾತ್ರದಲ್ಲಿಯೇ ಎದ್ದು ಕುಳಿತು ತಾಯಿಗೆ ಹೀಗೆ ಹೇಳಿತು.

"ಅಮ್ಮಾ, ಆ ಸೈನಿಕನನ್ನು! ಇಲ್ಲಿಗೆ ಬರಮಾಡು"

ಅವಳಿಗೆ ಅತ್ಯಾನಂದವಾಯಿತು ತನ್ನ ಮಗನು ಮಾತನಾಡುವ, ನಗುವ ಮತ್ತು ಕುಳಿತುಕೊಳ್ಳುವ ಸಾಮರ್ಥ್ಯವನ್ನು ತೋರಿಸಿದಾಗ ಆಕೆ ಸಂತೋಷ ಸಾಗರದಲ್ಲಿ ತೇಲಿದಳು. ಆದರೂ ಜಿಗುಪ್ಸ ಭಾವದಿಂದ ಸೈನ್ಯಾಧಿಕಾರಿಗೆ ತನ್ನ ಮನೆಗೆ ಬರಲು ಹೇಳಿ ಕಳಿಸಿದಳು.

> ವಿಯೆತ್‌ನಾಮವು ದಂತ ಕತೆಗಳಿಂದ ತುಂಬಿದ ದೇಶ. ಅವುಗಳು ದಂತ ಕತೆಗಳಾದರೂ ಎಲ್ಲವೂ ಕೇವಲ ದಂತಕತೆಗಳಾಗಿಲ್ಲ, ಸಾವಿರಾರು ವರುಷಗಳ ಹಿಂದೆ ನಡೆದ ಸತ್ಯ ಘಟನೆಗಳನ್ನು ಹೇಳುವಂಥವಾಗಿವೆ. ಆದರೆ ಅವು ಜನರ ಕಲ್ಪಕ ಬುದ್ಧಿಯಿಂದ ಕಟ್ಟು ಕಥೆಗಳಂತೆ ರೂಪುಗೊಂಡಿವೆ. ಇವುಗಳು ಆದೆಷ್ಟೇ ಕಟ್ಟುಕಥೆಗಳಾಗಿದ್ದರೂ ಇವುಗಳು ಮುಖ್ಯ ವಸ್ತುಹೃದಯ ಮಾತ್ರ ಶ್ರಮದ ಮೇಲೆ ಜನತೆಗಿರುವ ಪ್ರೇಮ ಅಥವಾ ವಿದೇಶೀ ಧಾಳಿಗಾರರಿಗೆದುರಾಗಿ ನಡೆಸಿದ ಧೀರ ಹೋರಾಟ ಆಗಿರುತ್ತದೆ. ದೇವಯೋಧ ಗಿಯಾಂಗ್ ಎಂಬುದು ಎರಡನೆಯ ವರ್ಗಕ್ಕೆ ಸೇರಿದ ಕತೆಯಾಗಿದೆ. ಮೊದಲನೆಯ ವರ್ಗಕ್ಕೆ ಸೇರುವ ಕತೆ "ಅನ್ನ ಜನತೆಯ ಆಹಾರವಾದದ್ದು ಅಥವಾ ಅಡಿಗೆಯ ಅಧಿದೇವತೆಗಳು" ಎಂಬ ಇನ್ನೊಂದು ವಿಯೆತ್‌ನಾಮೀ ಜಾನಪದಕತೆ ಜೂನ್ 15ರ 'ಜನಶಕ್ತಿ'ಯಲ್ಲಿ ನೀವು ಓದಿರಲು ಸಾಕು. —ಸಂ.

ಗಿಯಾಂಗನು ಅತಿ ಗಂಭೀರ ವದನದಿಂದ ಸೈನ್ಯಾಧಿಕಾರಿಗೆ, "ನೀನು ಈ ಕೂಡಲೆ ನಿನ್ನ ಅರಸನ ಬಳಿ ಹೋಗಿ, ನನಗೆ ಉಕ್ಕಿನವೊಂದು ಉದ್ದವಾದ ಭಾಲೆ, ಶಿರಸ್ತ್ರಾಣ ಮತ್ತು ಚಿಲಕತ್ತು ಬೇಕೆಂದು ತಿಳಿಸು. ಅಲ್ಲದೆ ಬಹುದೊಡ್ಡದು ಮತ್ತು ಎತ್ತರವಾದ ಕಬ್ಬಿಣದ ಒಂದು ಕುದುರೆಯನ್ನು ಕಳಿಸಿ ಕೊಡಬೇಕೆಂದು ಹೇಳು" ಎಂದು ನುಡಿದನು.

ಆ ಸೈನ್ಯಾಧಿಕಾರಿಗೆ ಬಾಲಕನ ಮಾತು ಕೇಳಿ ಅತ್ಯಾಶ್ಚರ್ಯವಾಯಿತು. ಮೋಜೆನಿಸಿದರೂ ಬಾಲಕನ ಕೇಳಿಕೆಯನ್ನು ಅರಸನಿಗೆ ನಿವೇದಿಸಿದನು.

ಹಗೆಗಳ ಮುತ್ತಿಗೆಯಿಂದ ಬಿಡುಗಡೆಯ ದಾರಿ ಕಾಣದೆ ಹೌಹಾರಿದ ಅರಸನಿಗೆ ಬಾಲಕನ ಸಮಾಚಾರ ತಿಳಿದೊಡನೆಯೆ ಪರಮಾನಂದವಾಯಿತು. ಗಿಯಾಂಗನ ಹೇಳಿಕೆಯಂತೆ ಎಲ್ಲ ಯುದ್ಧ ಸಾಮಾಗ್ರಿಗಳನ್ನೂ ಅವನಿಗೆ ಕಳುಹಿಸಬೇಕೆಂದು ಆಜ್ಞೆ ಮಾಡಿದನು. ಭಾಲೆ, ಶಿರಸ್ತ್ರಾಣ, ಉಕ್ಕಿನಂಗಿ, ಕಬ್ಬಿಣದ ಕುದುರೆ ಎಲ್ಲವುಗಳೂ ಕುಶಲ ಕಮ್ಮಾರನಿಂದ ಉತ್ತಮ ಮಟ್ಟದ ಲೋಹದಿಂದ ಸುಂದರವಾಗಿ ಮಾಡಲ್ಪಟ್ಟದ್ದವು.

ಗಿಯಾಂಗನು ಎದ್ದು ಕುಳಿತುಕೊಳ್ಳಲು ಪ್ರಾರಂಭ ಮಾಡಿದ ದಿನದಿಂದಲೂ ಅವನ ಹಸಿವೆ ಎಷ್ಟು ಉಂಡರೂ ಹಿಂಗದಾಯಿತು. ಗಂಟೆ ಗಂಟೆಗೂ ಹೆಚ್ಚಾಗುತ್ತಲೇ ಇತ್ತು.

"ಅಮ್ಮಾ, ಅಮ್ಮಾ, ನನಗೆ ಬಹಳಷ್ಟು ಅನ್ನ, ಮಾಂಸ ಬೇಕು. ಹಸಿವೆ ಹಸಿವೆ ವಿಪರೀತವಾಗಿದೆ. ಮತ್ತೆ ನಾನು ಆ ಭಯಂಕರ ಶತ್ರುಗಳೊಡನೆ ಯುದ್ಧ ಮಾಡಲು ಹೋಗಬೇಕಾಗಿದೆ." ಎಂದು ಗಿಯಾಂಗ ಕನಿಕರದಿಂದ ಕೇಳಿದನು. ಆದರೆ ಇದಕ್ಕೂ ಮೊದಲು ತಾಯಿ ಮಾಡಿಟ್ಟ ಎಲ್ಲ ಅಡಿಗೆಯನ್ನುಂಡು ತೇಗಿದ್ದನು. ಆವನು ಅಳತೆ ಮೀರಿ ಬೆಳೆದಂತೆ ಅವನ ಹಸಿವೆಯನ್ನಡಗಿಸಲು ಅನ್ನ, ಮಾಂಸ, ಫಲ್ಯ ಮತ್ತೇನೆಲ್ಲ ತಿನ್ನುವ ಪದಾರ್ಥಗಳನ್ನು ತಂದು ಕೊಟ್ಟರು. ಆದರೂ ಆತನ ಭೀಮ ಹೊಟ್ಟೆಗೆ ಸಾಲದಾಯ್ತು.

ಯುದ್ಧ ಸಾಮಾಗ್ರಿಗಳೆಲ್ಲ ಗಿಯಾಂಗನ ಬೇಡಿಕೆಯ ಪ್ರಕಾರ ಅವನ ಹಳ್ಳಿಗೆ ಬಂದವು. ಗಿಯಾಂಗನು ಮನೆಯಿಂದ ಹೊರಬಂದು ಬೈಲಿಗೆ ನಿಂತು ತನ್ನ ದೇಹವನ್ನು ನಿಡಿದಾಗಿ ಚಾಚಿ ಬಾಗಿ ಎಳೆದು ಎತ್ತರವಾಗಿ ಬೆಳೆದು ನಿಂತನು. ಆಗ ಆವನು ಗಂಭೀರವಾದ ತೇಜಸ್ಸಿರುವ ದೇವಪುರುಷನಂತೆ ಕಂಗೊಳಿಸಿದನು.

ಗಿಯಾಂಗನು ಉಕ್ಕಿನಂಗಿಯನ್ನು ತೊಟ್ಟು ಶಿರಸ್ತ್ರಾಣವನ್ನು ತಲೆಗಿಟ್ಟುಕೊಂಡು ವೀರರಕ್ಕೆಗೊಪ್ಪುವ ಭಯಂಕರ ಭಾಲೆಯನ್ನು ಎತ್ತಿ ಹಿಡಿದು ಚಂಡಮಾರುತನ ವೇಗತುಲ್ಯವಾದ ಕುದುರೆಯನ್ನೇರಿ ಮುಗಿಲ ಕಡೆನೋಡಿ ಕುದುರೆಯ ಬೆನ್ನು ಚಪ್ಪರಿಸಿದನು. ಚಪ್ಪರಿಸಿದೊಡನೆಯೇ ಕುದುರೆಯು ಭೀಷಣದ ದನಿಯಿಂದ ಹೇಂಕರಿಸುತ್ತ, ಬಾಯಿಂದ ಅಗ್ನಿಕಾರುತ್ತ ಮುಂಗಾಲುಗಳನ್ನೆತ್ತಿ ಹಿಂಗಾಲಿನಲ್ಲಿ ಶಕ್ತಿಸಂಗ್ರಹಿಸಿ ಒಂದೇಟಿಗೆ ಗಕ್ಕನೆ ಮೇಲೆ ಹಾರಿತು. ಕುದುರೆಯ ನೆಗೆತದೊಂದಿಗೆ ಪ್ರತಿಭಾವಂತ ಯೋಧನಾದ ಗಿಯಾಂಗನು ಚಂಗನೆ ಜಿಗಿದು ಕುದುರೆಯ ಬೆನ್ನೇರಿದನು. ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿಯೇ ಕುದುರೆಯು ಸಹಸ್ರಾರು ಯೋಧರ ಮಧ್ಯೆ ಹಾಯ್ದೋಡಿ ನೆಲಕ್ಕುರುಳಿಸಿ ಮರುಳ್ಗಾಡನ್ನಾಗಿ ಮಾಡಿತು. ಕುದುರೆಯ ಓಟದ ರಭಸಕ್ಕೂ, ಯೋಧನ ಭಾಲೆಯ ತೀವ್ರ ತಿವಿತಕ್ಕೂ ಆಹುತಿಯಾಗಿದ್ದ ವೈರಿಗಳ ಸಂಖ್ಯೆ ಎಣಿಸಲಳವಲ್ಲ. ಹೆಣಗಳು ತುಂಡು ತುಂಡಾಗಿ ನೆಲದ ಧೂಳಿಕಣಗಳಲ್ಲಿ ಬೆರೆತಿದ್ದವು ಕುದುರೆಯ ಹೇಂಕಾರ ಧ್ವನಿಯು ಎಲ್ಲೆಡೆಯೂ ಪ್ರತಿಧ್ವನಿತವಾಗುತ್ತಿತ್ತು. ಅದು ಬಾಯಿಂದ ಕಾರಿದ ಕೆಂಡವು ಜ್ವಾಲೆಯಾಗಿ ವೈರಿಗಳ ಬಿಡಾರಗಳನ್ನೆಲ್ಲ ದಹಿಸಿ ಬೂದಿ ಮಾಡಿತು. ಸುತ್ತಮುತ್ತಲಿನ ಅಡವಿಯು ಸುಟ್ಟು ಸುಡುಗಾಡಾಯಿತು. ವೇಗದ ಜೋರಿನಲ್ಲಿ, ಹೊಡೆಯುವ ಸ್ಫೂರ್ತಿಯಲ್ಲಿ ಭಾಲೆಯು ಮುರಿದು ಕೆಳಗೆ ಬೀಳಲು, ಗಿಯಾಂಗ ಯೋಧನು ಬಿದಿರು ಮೆಳೆಗಳನ್ನು ಬೇರು ಸಹಿತ ಕಿತ್ತುಕೊಂಡು ಶತೃಗಳ ಸದ್ದಡಗಿಸಿದನು. ಮಿಕ್ಕುಳಿದ ಎಷ್ಟೋ 'ಅನ್' ವೈರಿಗಳ ದಂಡಾಳುಗಳು ದಿಕ್ಕೆಟ್ಟು ಓಡಿದರು. ಸಾಕ್‌ಸನ್ ಪರ್ವತದ ತುತ್ತತುದಿಗೆ ಬಂದು ನಿಂತಾಗ ಕೆಚ್ಚೆದೆಯ ಬಂಟನಿಗೆ ವೈರಿಗಳೊಬ್ಬರೂ ಜೀವಂತರಾಗಿರುವದು ಕಾಣಲಿಲ್ಲ. ಎಲ್ಲಿ ನೋಡಿದರಲ್ಲಿ ಹೆಣಗಳ ರಾಶಿ ಒಟ್ಟಿದೆ.

ನೀವೇನು ಹೇಳು

ಕೇರಳ ಪಠ್ಯ ಪುಸ್ತಕಗಳ ಸ

ಕೇರಳ ಸರಕಾರದಿಂದ ಎಲ್ಲಾ ತರಗತಿಯ ವಿದ್ಯಾರ್ಥಿಗಳಿಗೂ ಮಂಜೂರು ಮಾಡಲ್ಪಟ್ಟ ಪಠ್ಯ ಪುಸ್ತಕಗಳು "ವಿದ್ಯಾರ್ಥಿಗಳಲ್ಲಿ ಕಮ್ಯೂನಿಸಂ ವಿಚಾರಧಾರೆಯನ್ನು ತುಂಬುವಂಥದೂ, ಕಮ್ಯೂನಿಸ್ಟ್ ಸಮಾಜವ್ಯವಸ್ಥೆಯನ್ನು ಬೋಧಿಸುವಂಥದೂ" ಆಗಿದೆ ಎಂಬ ಭಯಂಕರ ಅಪಾದನೆಗಳನ್ನು ಆಗಾಗ ಪತ್ರಿಕೆಗಳಲ್ಲಿ ಹೊರಿಸಲಾಗುತ್ತಿದೆ.

ಇದೇನು ಹೊಸ ಅಪಾದನೆಯಲ್ಲ. ಜನತೆಯ ಪ್ರೀತಿ ಸಂಪಾದಿಸಿ ಅಧಿಕಾರ ವಹಿಸಿಕೊಂಡಂದಿನಿಂದ ಕಮ್ಯೂನಿಸ್ಟ್ ಸರಕಾರದ ಮೇಲೆ ವಿರೋಧಿ ಪಕ್ಷಗಳು ಆಸಕ್ತ ಹಿತಗಳೂ ಹೊರಿಸುತ್ತಿರುವ ನಿರಾಧಾರ ಅಪಾದನೆಗಳು, ಅರ್ಥಹೀನ ಅಪಪ್ರಚಾರಗಳು ಲೆಕ್ಕವಿಲ್ಲದಷ್ಟಿವೆ. ಆಗಾಗ ಇವುಗಳ ಸತ್ಯ ಸ್ವರೂಪವನ್ನು ಕಾಲಂಗಳಲ್ಲಿ ತೋರಿಸುತ್ತಿದ್ದೇವೆ. ಈ ಅಪಾದನೆಯಲ್ಲಿರುವ ಹುರುಳಾದರೂ ಎಷ್ಟು?

★ ಅಖಿಲ ಕೇರಳ ಕೆಥೋಲಿಕ್ ಕಾಂಗ್ರೆಸ್ಸು "ಹೊಸ ಪಠ್ಯ ಪುಸ್ತಕಗಳ ನಿಜವಾದ ಬಣ್ಣ" ಎಂದು ಹೇಳುತ್ತ 11ನೇ ತರಗತಿಗೆ ಗೊತ್ತು ಮಾಡಲ್ಪಟ್ಟ ಸಾಮಾನ್ಯ ವಿಜ್ಞಾನದ ಒಂದು ಪರಿಚ್ಛೇದವನ್ನೇ ಹೊಡೆದು ಹಾಕಬೇಕೆಂದರು. ಅದರಲ್ಲಿದ್ದುದೇನು? ಅದರಲ್ಲಿರುವುದು ಡಾರ್ವಿನ್‌ನ ಉತ್ಕ್ರಾಂತಿಯ ಹಾಗೂ ಈ ಭೂಮಿಯ ಮೇಲೆ ಜೀವನ ಮೂಲ ಹೇಗಾಯಿತೆಂಬ ವಿಷಯ. ಜೀವದ ಬೆಳವಣಿಗೆ ಹೇಗಾಯಿತು? ಇಂದಿನ ಮಟ್ಟಕ್ಕೆ ಮನುಷ್ಯ ಹೇಗೆ ಬಂದ ಎಂಬುದೇ ವಿಚಾರ. ಇದಕ್ಕೇ ಅವರು ಕಮ್ಯೂನಿಸ್ಟ್ ತತ್ವಪ್ರಚಾರ, ತಲೆಯಲ್ಲಿ ಕಮ್ಯೂನಿಸಂ ತುಂಬುವುದು ಎಂದು ಹೇಳಿದುದು!

ಪಠ್ಯ ಪುಸ್ತಕಗಳ ವಿರೋಧ ಹೋರಾಟವನ್ನು ಮೊದಲು ಆರಂಭಿಸಿದವರು ಕ್ಯಾಥೊಲಿಕ್ ಕಾಂಗ್ರೆಸ್‌ನವರು. ಆಮೇಲೆ ಕೇರಳ ಕಾಂಗ್ರೆಸ್ಸಿಗರು ಅದನ್ನು ವಹಿಸಿ

ಚುಟು
ಬಡವನ ಬ
ಅಲ್ಲಿ ನಾ
ಇಲ್ಲಿ
ಅಲ್ಲಿ-ಇಲ್ಲಿಯ
ಬದುಕ
ಭಾವೋನ್ಮುಖಿ
ಹೆಣ್ಣಿಗೂ
ಮುರಿ
ಬಾಳ-ಬವಣೆ
ಅಗದಿ
ತನ್ನ ಶ್ರಮ
ಹಿಗ್ಗಿ ವೀರ ಗಿಯ
ಸ್ರಾಣಗಳನ್ನು
(ಕನೇ

ಕೊಂಡರು. ಕೇ
ಮ್ಯಾನೇಜರ್ಸ್
ಯವರೆಗೂ ಓಡಿ
"ಕೇರಳದ ಮಕ್ಕ
ರುವ ಕಮ್ಯೂನಿ
ಣಾಮಗಳ ಅಪ
ವಹಿಸಬೇಕು" ಎ
ಇವರೀಗೋ
ದ್ದೇಶವೇ ಬೇರೆ.
ಸಗೀ ಉದ್ಯಮ
ರಳ ಸರ್ಕಾರವು
ಕರಣ ಮಾಡಿದ
ಕೊಂಡರು. ಇವ
ಯವರು ಪ್ರಕಟಿ
ಲೆ ರೂ. 1=75
ವೇ ವಹಿಸಿಕೊಂ
ಕೇವಲ 60 ನ
ಗಿದೆ! ಪಠ್ಯ
ಮಂಡಳಿಗಳಲ್ಲಿಯ
ಕೊನೆಗಾಣಿಸಲಾ
ನಿಂದ ವಿದ್ಯಾರ್ಥಿ
ಗಾದರು, ಶೋಷಿ
★ ಇದೇ
ಧ್ಯಕ್ಷರಿಗೆ ಅರ್ಪಿ
ಸ ಪಠ್ಯ ಪುಸ್ತಕಗ
ಸಿದ ಹೆಸರುಗಳವ
ಎಂದು ದೂರಿಕೆ
ಶೇಕಡಾ ನೂರರ
ವ ಬರೆಹಗಾರರಿ
ಡಲಿಲ್ಲ. ಅದಕ್ಕಾ
ಜನರನ್ನೊಳಗೊ
ಇವುಗಳನ್ನು ಸಿ
"ಇವರಲ್ಲಿ ಬಹು
ಸ್ಟರು" ಎಂಬ ಆ
ಲ್ಲರ ಹೆಸರುಗಳ
ಒಬ್ಬರೂ ಕಮ
ಸಮಿತಿಯಿಂದು

ಗದಗಿನಲ್ಲಿ ವಿದ್ಯುತ್‌ಶಕ್ತಿ ರಾಷ್ಟ್ರೀಕರಣ ಸಮ್ಮೇಳನ

ಉತ್ತರ ಕರ್ನಾಟಕದಲ್ಲಿ ವಿದ್ಯುತ್ ಪೂರೈಕೆಯ ರಾಷ್ಟ್ರೀಕರಣವಾಗಲಿ!

ಉತ್ತರ ಕರ್ನಾಟಕದಲ್ಲಿಯ ವಿದ್ಯುತ್ ಪೂರೈಕೆ ಮತ್ತು ವಿತರಣೆಯು ಅತಿ ಅಸಮಾಧಾನಕರವಾಗಿದ್ದು, ಮುನಿಸಿಪಾಲಿಟಿಯವರೂ, ಸಾರ್ವಜನಿಕರೂ, ಸರಕಾರಕ್ಕೆ ಎಷ್ಟು ಅರ್ಜಿ, ಮನವಿಗಳನ್ನರ್ಪಿಸಿದರೂ, ಅವರು ಯಾವದೇ ಕ್ರಮ ತೆಗೆದುಕೊಳ್ಳದೆ, ನಾಗರಿಕರ ಸಂಕಷ್ಟಗಳನ್ನು ದೂರ ಮಾಡಲಿಕ್ಕೆ ಮುಂದೆ ಬಾರದೇ ಇದ್ದುದರಿಂದ, ಗದಗ ಮುನಿಸಿಪಾಲಿಟಿಯವರ ನೇತೃತ್ವದಲ್ಲಿ ಉತ್ತರ ಕರ್ನಾಟಕದ ವಿದ್ಯುತ್ ಪೂರೈಕೆಯ ರಾಷ್ಟ್ರೀಕರಣವಾಗಬೇಕೆಂದು ಸರಕಾರದ ಮೇಲೆ ಒತ್ತಾಯ ತರುವುದರ ಸಲುವಾಗಿ, ತಾ॥ ೯—೧೦ರಂದು, ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಜರಗಿತು. ಲೋಕೋಪಯೋಗಿ ಮತ್ತು ವಿದ್ಯುತ್ ಶಕ್ತಿ ಮಂತ್ರಿಗಳಾದ ಶ್ರೀ ಚೆನ್ನಬಸಪ್ಪನವರು ಸಮ್ಮೇಳನದ ಉದ್ಘಾಟನೆ ಮಾಡಿದರು. ಬಿಜಾಪುರ, ಬಾಗಲಕೋಟೆ, ರಬಕವಿ, ಅಥಣಿ, ರಾಯದುರ್ಗ, ಬ್ಯಾಡಗಿ, ರಾಣಿಬೆನ್ನೂರ, ಸಿರಸಿ ಮತ್ತು ಗದಗಿನಿಂದ ಪ್ರತಿನಿಧಿಗಳು,—ಮುನಿಸಿಪಾಲಿಟಿಯ ಅಧ್ಯಕ್ಷರು, ಸದಸ್ಯರು ಮತ್ತು ವಿದ್ಯುತ್ ಬಳಕೆಗಾರರು—ಹಾಜರಿದ್ದರು.

ಇದು ವಿದ್ಯುತ್‌ಶಕ್ತಿ ಯುಗ. ಉದ್ಯೋಗ — ಕೈಗಾರಿಕೆಗಳ ಬೆಳವಣಿಗೆಗೆ, ನೀರಾವರಿ ಯೋಜನೆಗಳಿಗೆ, ರೈಲು—ಟ್ರಾಂ ಚಲಾವಣೆಗಳಿಗಷ್ಟೇ ಅಲ್ಲ, ಅಡುಗೆಗೂ ಕೂಡ ಈ ಹೊತ್ತು ವಿದ್ಯುತ್ ಶಕ್ತಿ ಉಪಯೋಗ ಮಾಡಲಾಗುತ್ತಿದೆ. ವಿದ್ಯುತ್ ಶಕ್ತಿಯು ದೇಶದ ಪ್ರಗತಿಯ ಪ್ರತೀಕವಾಗಿದೆ.

ಹೊಸ ಮೈಸೂರು ರಾಜ್ಯದಲ್ಲಿ 1300 ಸ್ಥಳಗಳಲ್ಲಿ ವಿದ್ಯುತ್ ಪೂರೈಕೆ ಕೇಂದ್ರಗಳಿವೆ. ಇವುಗಳ ಪೈಕಿ ಹಳೇ ಮೈಸೂರು ರಾಜ್ಯದಲ್ಲಿ 1128, ಮುಂಬಯಿ ಕರ್ನಾಟಕದಲ್ಲಿ 33, ಹೈದರಾಬಾದ್ ಕರ್ನಾಟಕದಲ್ಲಿ 9, ಕೊಡಗಿನಲ್ಲಿ 6 ಮತ್ತು ಮದ್ರಾಸ್ ಕರ್ನಾಟಕದಲ್ಲಿ 39 ಕೇಂದ್ರಗಳಿವೆ.

ಹಳೇ ಮೈಸೂರು ರಾಜ್ಯವು ವಿದ್ಯುತ್ ಪೂರೈಕೆ ಬೆಳವಣಿಗೆಯಲ್ಲಿ ನಮ್ಮ ದೇಶದಲ್ಲಿಯೇ ಯಾಕೆ ಎಲ್ಲಾ ಪೂರ್ವ ದೇಶಗಳಲ್ಲಿಯೂ ಪ್ರಥಮ ಸ್ಥಾನ ಪಡೆದಿತ್ತು. ದೇಶದಲ್ಲಿ ವಿದ್ಯುತ್‌ಶಕ್ತಿ ಹೇಗೆ ಹೊರಡಿಸಬೇಕೆಂಬ ವಿಚಾರದಲ್ಲಿದ್ದಾಗಲೇ, ಹಳೇ ಮೈಸೂರಿನ ಆಡಳಿತೆದಾರರು, ಕಾವೇರಿ ಜಲಪಾತದಿಂದ ವಿದ್ಯುತ್ ಹೊರಡಿಸುವ ಮಹಾ ಕಾರ್ಯದಲ್ಲಿ ಕೈಹಾಕಿ 1902 ರಲ್ಲಿ ಶಿವಸಮುದ್ರದಿಂದ ಕೋಲಾರ ಚಿನ್ನದ ಗಣಿ ತನಕ 92 ಮೈಲುದ್ದ ವಿದ್ಯುತ್ ಪೂರೈಸುವುದರಲ್ಲಿ ಯಶಸ್ವಿಯಾಗಿ ಜಗತ್ತಿಗೇ ಆಶ್ಚರ್ಯವನ್ನುಂಟುಮಾಡಿದರು. ರೂ. 60 ಲಕ್ಷ ಖರ್ಚುಮಾಡಿ, ಶಿವಸಮುದ್ರದಲ್ಲಿ 4300 ಕಿ. ವಾ. ವಿದ್ಯುತ್ ಹೊರಡಿಸಲಾಯಿತು. ಮೈಸೂರು, ಬೆಂಗಳೂರುಗಳಿಗೆ ವಿದ್ಯುತ್ ಪೂರೈಸುವುದರ ಸಲುವಾಗಿ 1913ರಲ್ಲಿ 83 ಲಕ್ಷ ರೂಪಾಯಿ ಖರ್ಚು ಮಾಡಿ ಉತ್ಪಾದನಾ ಶಕ್ತಿಯನ್ನು 9360 ಕಿ. ವಾ. ಏರಿಸಲಾಯಿತು. ಸದ್ಯ ಇಲ್ಲಿ 42,000 ಕಿ. ವಾ. ಶಕ್ತಿ ಉತ್ಪಾದನೆಯಾಗುತ್ತಿದೆ. ಕಾವೇರಿ ವಿದ್ಯುತ್ ಯೋಜನೆಯ ಒಟ್ಟು ಖರ್ಚು 285 ಲಕ್ಷ ರೂ.

ವಿದ್ಯುತ್ತಿನ ಮಹತ್ವನ್ನರಿತ ಮೈಸೂರು ಸರಕಾರ, ಜನರ ಮತ್ತು ಕೈಗಾರಿಕೋದ್ಯಮಿಗಳ ಬೇಡಿಕೆ ಬೆಳೆಯುತ್ತಿರುವುದನ್ನು ನೋಡಿ, ಪ್ರಗತಿಯನ್ನು ಮುಂದರಿಸುವ ವಿಚಾರದಿಂದ, ವಿದ್ಯುತ್ ಪೂರೈಕೆಯ ಹೊಸ ಸಾಧನೆಗಳನ್ನು ಹುಡುಕ ಹತ್ತಿದರು. 1940 ಶಿವಸಮುದ್ರದ ಸಮಿಾಗವಿರುವ ಸಿಂಸಾ ಯೋಜನೆಯನ್ನು ಕೈಕೊಳ್ಳಲಾಯಿತು. ಇದರಿಂದ 17,000 ಕಿ.ವಾ. ಶಕ್ತಿ ಹೊರಡುತ್ತಿದೆ.

1939ರಲ್ಲಿ ಜಗತ್ತಿನಲ್ಲಿಯೇ ಅತಿ ಸುಂದರವಾದ ಶರಾವತಿ ನದಿಯ ಜಲಪಾತದಲ್ಲಿ, ಜೋಗ ಯೋಜನೆ–ಮಹಾತ್ಮಾ ಗಾಂಧಿ ಹೈಡ್ರೋ ಇಲೆಕ್ಟ್ರಿಕ್ ವರ್ಕ್ಸ್—ಯನ್ನು ಕೈಕೊಂಡು, 1952ರಲ್ಲಿ 1,20,000 ಕಿ.ವಾ. ಶಕ್ತಿಯನ್ನು ಉತ್ಪಾದನೆ ಮಾಡಲಾಯಿತು

ಈ ರೀತಿ ಹಳೇ ಮೈಸೂರು ಸರಕಾರ ಅರ್ಧ ಶತಮಾನದಲ್ಲಿ ಹೈಡ್ರೋ ಇಲೆಕ್ಟ್ರಿಕ್ ಯೋಜನೆಯ ಸಲುವಾಗಿ 2780 ಲಕ್ಷ ರೂಪಾಯಿ ಖರ್ಚು ಮಾಡಿರುವುದು ಪ್ರಶಂಸನೀಯವಾಗಿದೆ. 1128 ನಗರ ಮತ್ತು ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಮಾಡಿದೆ ಮತ್ತು ಪ್ರತಿಯೊಬ್ಬನಿಗೆ ಸರಾಸರಿ 58 ಯೂನಿಟ್ಟಿನಂತೆ ಶಕ್ತಿಯನ್ನೊದಗಿಸುತ್ತಿದೆ.

ಉತ್ತರ ಕರ್ನಾಟಕದ ಕ್ಷೇತ್ರ ಮತ್ತು ಜನಸಂಖ್ಯೆ ಇಡೀ ಮೈಸೂರು ರಾಜ್ಯದ 29 ಕ್ಕೆ ಮತ್ತು 27 ಕ್ಕೆ ಇದ್ದರೂ ಕೂಡ, ಈ ಭಾಗದಲ್ಲಿ ಒಂದೇ ಒಂದು ಹೈಡ್ರೋ ಇಲೆಕ್ಟ್ರಿಕ್ ಪವರ ಸ್ಟೇಶನು ಇಲ್ಲ. ಒಟ್ಟು ಈ ಭಾಗದಲ್ಲಿ 35 ಹಳ್ಳಿ ಮತ್ತು ನಗರಗಳಿಗೆ ವಿದ್ಯುತ್ ಪೂರೈಕೆಯಾಗುತ್ತಿದೆ. ಇಲ್ಲಿಯ ಜನರಿಗೆ ಸರಾಸರಿ 3 ಯೂನಿಟ್ಟಿಗಿಂತಲೂ ಕಡಿಮೆ ವಿದ್ಯುತ್ ಶಕ್ತಿ ಸಿಗುತ್ತಿದೆ.

ಮೊದಲನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ 1955 ಜುಲೈ ತಿಂಗಳಲ್ಲಿ ಮೊದಲನೇ ಸಲ ಜೋಗ್—ಕರ್ನಾಟಕ ಗ್ರಿಡ ಮೂಲಕ, ರೂ. 230 ಲಕ್ಷ ಖರ್ಚು ಮಾಡಿ ಧಾರವಾರ, ಹುಬ್ಬಳ್ಳಿ, ಗದಗ ಭಾಗಗಳಿಗೆ ವಿದ್ಯುತ್ ಪೂರೈಸಲಾಯಿತು. ಅದಕ್ಕೂ ಆರು ತಿಂಗಳ ಮುಂಚಿತವಾಗಿ ಹರಿಹರ ಭಾಗದಿಂದ ಬ್ಯಾಡಗಿ, ಹಾವೇರಿ, ರಾಣಿಬೆನ್ನೂರ ಸ್ಥಳಗಳಲ್ಲಿದ್ದ ಖಾಸಗೀ ಲೈಸನ್ಸ್‌ದಾರರಿಗೆ ಗ್ರಿಡದವರು ಬಲ್ಕ ಪೂರೈಕೆ ಮಾಡಿದರು. ಈ ರೀತಿ ಕಾರವಾರ ಮತ್ತು ಧಾರವಾರ ಜಿಲ್ಲೆಯ ಕೆಲವು ಕಡೆ ಜೋಗದಿಂದ ವಿದ್ಯುತ್ ಪೂರೈಕೆಯಾಗುತ್ತಿದೆ. ಆದರೆ ಈ ಪೂರೈಕೆಯ ಕೆಲಸವನ್ನು ಸರಕಾರದವರೇ ಮಾಡದೆ ಖಾಸಗೀ ಲೈಸನ್ಸ್‌ದಾರರಿಗೆ ಒಪ್ಪಿಸಿರುವುದರಿಂದ, ಧಾರಣೆ ಹೆಚ್ಚಾಗಿದೆ, ಯೋಗ್ಯ ರೀತಿಯ ವಿತರಣೆಯಾಗುವುದಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಇಲಕಲ ಮೊದಲಾದ ನಾಲ್ಕೈದು ನೇಕಾರ ಕೇಂದ್ರಗಳಿಗೂ ಸ್ಥಳೀಕ ಗ್ರಿಡ ಮೂಲಕ ವಿದ್ಯುತ ಪೂರೈಸುಲಾಗುತ್ತಿದೆ.

ಹಳೇ ಮೈಸೂರು ಮತ್ತು ರಾಜ್ಯದ ಇನ್ನಿತರ ಭಾಗಗಳಲ್ಲಿ ವಿದ್ಯುತ್‌ಶಕ್ತಿ ದರಗಳ ಬಗ್ಗೆ ಇರುವ ಭೂಮ್ಯಾಕಾಶದಷ್ಟು ವ್ಯತ್ಯಾಸವನ್ನು ಸಂಕಾರದವರು ತೆಗೆದು ಹಾಕಿ ಇಡೀ ರಾಜ್ಯಕ್ಕೆ ಒಂದೇ ದರ ನಿಗದಿ ಮಾಡುವುದು ಅತ್ಯಗತ್ಯ. ಇದಾಗಬೇಕಾದರೆ ಖಾಸಗೀ ಲೈಸನ್ಸ್‌ದಾರರನ್ನು ತೆಗೆದು ಹಾಕಿ, ಸರಕಾರದವರೇ ವಿದ್ಯುತ ಪೂರೈಕೆ ಮತ್ತು ವಿತರಣೆಯ ಜವಾಬ್ದಾರಿ ವಹಿಸಬೇಕು.

ಹಳೇ ಮೈಸೂರಿನಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ ಹಾಗೂ ವಿತರಣೆ ಮುಂಚಿನಿಂದಲೂ ಸರಕಾರದ ಕೈಯಲ್ಲಿಯೇ ಇದೆ. ಈ ಕಾರಣದಿಂದಾಗಿ ಅಲ್ಲಿಯ ಔದ್ಯೋಗಿಕ ಪ್ರಗತಿಯು ಭದ್ರವಾದ ತಳಹದಿಯ ಮೇಲೆ ನಡೆದಿದೆ. ಅಲ್ಲಿಯ ನಾಗರೀಕರಿಗೂ, ಕೈಗಾರಿಕೆದಾರರಿಗೂ, ಯಾವದೂ ತಕರಾರುಗಳಿಲ್ಲದೆ ಕಡಿಮೆ ಧಾರಣೆಯಿಂದ ವಿದ್ಯುತ್ ಪೂರೈಕೆಯಾಗುತ್ತಿದೆ. ಆದರೆ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ 33 ಕೇಂದ್ರಗಳ ಪೈಕಿ 16 ಕೇಂದ್ರಗಳು ಇಂದಿಗೂ ಖಾಸಗೀ ಲೈಸೆನ್ಸದಾರರ ಅಧೀನದೊಳಗಿದೆ. ಉಳಿದ ಕೇಂದ್ರಗಳಿಗೆ ಸರಕಾರದವರು ಜೋಗಿನಿಂದ ಮತ್ತು ಗ್ರಿಡದಿಂದ, ಖಾಸಗೀ ಏಜಂಟರಿಗೆ ವಿದ್ಯುತ್ ಪೂರೈಕೆ, ವಿತರಣೆ ಮತ್ತು ಧಾರಣೆಯ ಸಂಬಂಧ ಜನರ ತಕರಾರುಗಳು ಸರಕಾರದ ಕಡೆ ರಾಶಿ ರಾಶಿಯಾಗಿ ಹೋಗಿವೆ–ಹೋಗುತ್ತಿವೆ. ಖಾಸಗೀ ಲೈಸನ್ಸ್‌ದಾರರು ಜನರಿಗೆ ಮತ್ತು ಉದ್ಯೋಗಸ್ಥರಿಗೆ ಸರಿಯಾಗಿ ವಿದ್ಯುತ್ ಒದಗಿಸುವದಿಲ್ಲ, ಅತಿ ಹೆಚ್ಚಿನ ಧಾರಣೆ ಹೇರುತ್ತಿ

(೬ನೇ ಪುಟ ನೋಡಿ)

ಎನ್. ಕೆ. ಉಪಾಧ್ಯಾಯ
ಬಿಜಾಪುರ

ರೈತಗಾನ

[ಧಾಟಿ:—ಸಾಥಿ ಹಾಥ್ ಬಡನಾ......'ನಯಾದೌರ್']

ಓಗೂಡಿಸಿರಿ ಕರೆಗೆ
ಸಸ್ಯಶ್ಯಾಮಲೆ ಧರಣಿಯ ಕರೆಗೆ
ರೈತ—ಕಾರ್ಮಿಕ ಮುನ್ನಡೆಗೆ !

ಅನುದಿನ ದುಡಿದ ಬೆವರಿನ ಸಿರಿಯು, ಈ ತೆಂಗು ಕಂಗು ಪೈರು !
ಚಳಿ-ಮಳೆ-ಗಾಳಿ ಬಿಸಿಲೆನ್ನದೆ ನಾವು, ಎರೆದೆವು ಸಾರದ ನೀರು !

ಫಲಿತ ತೆನೆಯ
ಬೆಳೆಯ ಸಿರಿಯ
ಕಸಿದುಕೊಳ್ಳುವವರ್‍ಯಾರು ?

ಉದಯವಾಗಲು, ದಿನದ ಮೊದಲು, ಎದ್ದೇಳುವೆವು ನಾವು !
ಹೊಲದಲಿ ಫಲಿತ ತೆನೆಯನು ಕಂಡು, ನಲಿವೆವು ತೋಸದಿ ನಾವು !

ಬಲದಿ ನೆಲದ
ಹೊಲದ ಬೆಳೆಯ
ಸುಲಿಯುವ ಜನಗಳ ಎದಿರಿಸುವಾ !

ಬೆಳೆಸಿದ ಬೆಳೆಯ, ತರತರ ಫಲವ, ತಿಂದುಂಡು ನಲಿವವರಾರು ?
ಫಲವನು ಕಸಿದು, ರೈತರ ಸುಲಿದು, ಹೊಲದಿಂ ದೂಡವರ್‍ಯಾರು ?

ದಾಸ್ಯ, ಸುಲಿಗೆ
ನಿತ್ಯ ಶೋಷಣೆ
ತೊರೆದು ಮುಕ್ತರಾಗುವಾ !

ಕಲಕಲ ನಿನದದೆ, ಹರಿಯುವ ಹೊನಲಿದೆ, ತನಿವಣ್ಣುಗಳು ತೂಗುತಿದೆ !
ಸವಿಯಲು ತನಿರಸವೊಸರುವ ಕಬ್ಬಿದೆ, ಫಲಿತ ತೆನೆಗಳ ಹಬ್ಬಿದೆ !

ಸುರಿಯುವ ಬೆವರಿನ
ದುಡಿತದ ಪ್ರತೀಕ
ಈ ಹೊಲದ ಸಿರಿಯು

ಜನಜೀವನದ ಮನದಲಿ ನಾವು, ಸಮತೆಯ ಬೀಜವ ಬಿತ್ತಿ !
ಮುಂದಿನ ಸಮತೆಯ ಬಾಳಿನ ಕಡೆಗೆ, ಕಾರ್ಮಿಕ ಬಾವುಟ ಹಿಡಿದೆತ್ತಿ !

ನಡೆವೆವು ಸಮರಕೆ
ಮಮತೆಯ, ಬಾಳಿಗೆ,
ಹೊಸ ಜಗ ಕಾಣ್ವೆವು ನಾವು !

"ಶ್ರಮಿಕ"

ಆಫ್ರೋ–ಏಶಿಯನ್ ಲೇಖಕರ ಸಮ್ಮೇಲನ

— ಏಷ್ಯ ಲೇಖಕರ ಕೃತಿಗಳ ಪ್ರಕಟಣೆ —

ಏಶಿಯಾ—ಆಫ್ರಿಕಾ ದೇಶಗಳ ಲೇಖಕರ ಪುಸ್ತಕಗಳ ಪ್ರಕಟನೆಗೆ ಸೋವಿಯೆತ್ ಅಜರ್‌ಬೈಜಾನ್ ಪ್ರಚುರಣಾಲಯಗಳ ಯೋಜನೆಗಳಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಕಳೆದ ಹಲವು ವರ್ಷಗಳಲ್ಲಿ ಮಾತ್ರವೇ ಈ ಎರಡು ಖಂಡಗಳ ಲೇಖಕರು ಬರೆದಿರುವ ೫೫ ಪುಸ್ತಕಗಳನ್ನು ಅಜರ್‌ಬೈಜಾರ್ ಭಾಷೆಯಲ್ಲಿ ಪ್ರಕಟಿಸಲಾಗಿದೆ. ಅವುಗಳ ಸಂಸ್ಕರಣಗಳು ಒಟ್ಟು ೫,೧೦,೦೦೦ ಪ್ರತಿಗಳಿಗಿಂತಲೂ ಹೆಚ್ಚಾಗಿ ಮುದ್ರಿತವಾಗಿವೆ.

ಭಾರತೀಯ ಲೇಖಕರ ಕೃತಿಗಳ ಪೈಕಿ, ರವೀಂದ್ರನಾಥ ಠಾಕೂರರ ಕತೆಗಳು, ಕೃಷ್ಣಚಂದರ್‌ರವರ, ಖ್ವಾಜ ಅಹಮದ್ ಅಬ್ಬಾಸರ ಮತ್ತು ಪ್ರೇಮಚಂದ್‌ರವರ ಕೃತಿಗಳು, ಮುಲ್ಕ್‌ರಾಜ್ ಆನಂದ್, ಭವಾನಿ ಭಟ್ಟಾಚಾರ್ಯ, ಯಶಪಾಲ್, ಇಬ್ರಾಹಿಂ ಜಾಲಿಸ್, ಮತ್ತಿತರ ಭಾರತೀಯರ, ಪಾಕೀಸ್ತಾನಿಗಳ ಕಥಾ ಸಂಗ್ರಹ, —ಇವುಗಳನ್ನು ಇಲ್ಲಿಯ ಪ್ರಕಟನಾಲಯಗಳು ಈಗಾಗಲೇ ಹೊರಡಿಸಿವೆ. ಕಿರಿಯ ಓದುಗರಿಗಾಗಿ "ಯಕ್ಷಣೀ ಬಟ್ಟಲು" ಮತ್ತು "ಭಾರತೀಯ ಜಾನಪದ ಕಥೆಗಳು" ಎಂಬೆರಡು ಭಾರತೀಯ ವಿಚಿತ್ರ ಕಥಾ ಸಂಗ್ರಹಗಳನ್ನು ೩೫,೦೦೦ ಪ್ರತಿಗಳ ಸಂಸ್ಕರಣದಲ್ಲಿ ಪ್ರಕಟಿಸಲಾಗಿದೆ.

ಮಹಾ ಚೀಣೀ ಲೇಖಕ ಲುಹ್ಸಂಗ್‌ರವರ ಕೃತಿಗಳು, ಔಯಾಂಗ್‌ಷಾಂಗ್‌ರವರ "ಜನತೆಯ ಆಳು" ಎಂಬ ಕಾದಂಬರಿ ಚೀಣೀ ಲೇಖಕರ ಕಥಾ ಸಂಗ್ರಹೆಗಳು, ಮತ್ತು ಚೀಣೀ ಲೇಖಕರು ಮಕ್ಕಳಿಗಾಗಿ ಬರೆದ ಅನೇಕ ಪುಸ್ತಕಗಳು, ಇವುಗಳನ್ನು ಇಲ್ಲಿಯ ಸಾರ್ವಜನಿಕ ಖಾಸಗೀ ಪುಸ್ತಕಾಲಯುಗಳಲ್ಲಿ ಕಾಣಬಹುದು.

ಉಮರ್ ಖಯ್ಯಾಂ ಬರೆದ 'ರುಬಾಯಿಯಾತ್', ತುರ್ಕಿಯ ಕವಿ ನಾಜಿಂ ಹಿಕ್ಮೆತ್ ಕವಿತಾ ಸಂಪುಟಗಳೆರಡು, ತುರ್ಕಿಯ ಸಲಖಾತ್‌ರ್ದಿ ಆಲಿ ಮತ್ತಿತರ ಲೇಖಕರ ಕತೆಗಳು, ಕೊರಿಯ್ರ ಲೇಖಕ ಹಾರ್ಸೂರ್ ಯಾರವರ ಕತೆಗಳು, ಈಜಿಪ್ಟಿನ ಕತೆಗಳ ಮತ್ತು ಆರ್ಫ್ಟ ವಿಚಿತ್ರ ಕತೆಗಳ ಸಂಕಲನಗಳು ಬೃಹತ್ ಸಂಸ್ಕರಣಗಳಲ್ಲಿ ಪ್ರಕಟವಾಗಿವೆ. ಬಣ್ಣ ಬಣ್ಣದ ಚಿತ್ರಗಳೊಡನೆ "ಅರೇಬಿಯಾ ರಾತ್ರೆಗಳು", "ಮಂಗೋಲಿಯಾ ವಿಚಿತ್ರ ಕತೆಗಳು" ಮತ್ತು ಇತರ ಕೃತಿಗಳನ್ನು ಪ್ರಕಟಿಸಲಾಗಿದೆ.

ಮುಂಬರುವ ಆಫ್ರೊ–ಏಶಿಯನ್ ಲೇಖಕರ ಸಮ್ಮೇಲನದ ಸಂದರ್ಭದಲ್ಲಿ ಅನೇಕ ನೂತನ ಪುಸ್ತಕಗಳು ಮುದ್ರಿತವಾಗುವುವು. ಟಾಗೋರರ ಕಾದಂಬರಿ "ನೌಕಾ ಘಾತ", ಅರಬ್ ವಿಚಿತ್ರ ಕತೆಗಳ ಸಂಕಲನ ಏಶಿಯಾ—ಆಫ್ರಿಕಾ ದೇಶಗಳ ಗದ್ಯ-ಪದ್ಯ ಲೇಖಕರ ಕೃತಿ ಸಂಗ್ರಹೆ ಮತ್ತು ಎಂ. ಆರಿಫ್‌ರವರ "ಅಜರ್‌ಬೈಜಾನಿಯದ ಸಾಹಿತ್ಯದ ಕುರಿತು ಪ್ರಬಂಧಗಳು"—ಈ ಕೃತಿಗಳನ್ನು ಅಜರ್‌ಬೈಜಾನಿಯ್ರ, ರಶಿಯ್ರ, ಅರಬ್, ಫಾರಸೀ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅಜೆರ್‌ನೆಷೆರ್ ಪ್ರಕಟನಾಲಯವು ಪ್ರಕಟಿಸುವುದು. 'ಅಜರ್‌ಬೈಜಾರ್' ಎಂಬ ಶೀರ್ಷಿಕೆಯ ಲಘು ಪರಿಚಯ ಪುಸ್ತಕವನ್ನು ಅಜರ್‌ಬೈಜಾನಿಯ್ರ, ರಶಿಯ್ರ, ಫಾರ್ಸಿ ಮತ್ತು ತುರ್ಕಿಷ್ ಭಾಷೆಗಳಲ್ಲಿ ಪ್ರಕಟಿಸಲಾಗುವುದು.

ಏಶಿಯದ ದೇಶಗಳ ವಿಚಿತ್ರ ಕತೆಗಳು, ಖ್ವಾಜಾ ಅಹಮದ್ ಅಬ್ಬಾಸ್‌ರವರ 'ಭಾರತ ಪುತ್ರ' ಕಾದಂಬರಿ, ಮತ್ತು ನಬಾಖತ್‌ರ್ದಿ ಆಲಿಯವರ 'ಹಸುಳೆ ಹರ್ಷ' ಕಥಾ ಸಂಗ್ರಹೆ—ಈ ಪುಸ್ತಕಗಳನ್ನು ಶಿಶು ಸಾಹಿತ್ಯ ಪ್ರಕಟನಾಲಯವು ಪ್ರಕಟಿಸುವುದು.

ರಾಜ್ಯ ರಾಜಕೀಯ ಸಾಹಿತ್ಯ ಪ್ರಕಟನಾಲಯ 'ಅಜರ್‌ಬೈಜಾರ್ ಸೋವಿಯೆತ್ ಗಣತಂತ್ರ' ವೆಂಬ ಆರ್ಥಿಕ, ಭೌಗೋಳಿಕ ಲಘು ಪರಿಚಯ ಪ್ರಬಂಧವನ್ನು ಪ್ರಕಟಿಸುವುದು. ಅಜರ್‌ಬೈಜಾರ್ ಗಣತಂತ್ರದ ಸ್ಥಾಪನೆಯ ಮತ್ತು ಅಭಿವೃದ್ಧಿಯ ಇತಿಹಾಸ, ಅದರ ಮುಖ್ಯ ಕೈಗಾರಿಕೆಗಳು, ಸಂಸ್ಕೃತಿ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿನ ಪ್ರಗತಿ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿಯನ್ನೂ ಮತ್ತು ಗಣತಂತ್ರದ ಅತ್ಯಂತ ದೊಡ್ಡ ನಗರಗಳ ವಿವರಣೆಯನ್ನೂ ಸಹ, ಈ ಹೊತ್ತಗೆಯಲ್ಲಿ ಪ್ರಕಟಿಸಲಾಗುವುದು.

ಕೇರಳದಲ್ಲಿ........

(೩ನೇ ಪುಟದಿಂದ)

ವ್ಯಯಿಸಲು ಬ್ಲಾಕ್ ಸಲಹಾ ಸಮಿತಿಗೆ ಸ್ವಾತಂತ್ರ್ಯವನ್ನಿತ್ತಿದೆ. ಇದೊಂದು ಪ್ರಾಯೋಗಿಕ ಯೋಜನೆಯೆಂದೂ ಆಜ್ಞೆ ತಿಳುಹಿಸಿದೆ.

o o o

ಕೇರಳ ಸರ್ಕಾರವು ನಿಯಮಿಸಿದ್ದ ಆಡಳಿತ ಸುಧಾರಣಾ ಸಮಿತಿಯು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವಿಶೇಷ ಉದ್ಯೋಗವಕಾಶವನ್ನು ನೀಡಲು ಸಲಹೆ ಮಾಡಿದೆ. ಕೆಲವೊಂದು ಆರ್ಥಿಕಮಟ್ಟದಿಂದ ಕೆಳಗಿರುವ ವ್ಯಕ್ತಿಗಳಿಗೆ ಸರಕಾರಿ ಕೆಲಸಗಳಲ್ಲಿ—ಗುಮಾಸ್ತ ಕೆಲಸಗಳಿಗೆ—ಸ್ಥಳಗಳನ್ನು ಕಾದಿಡುವಂತೆ ವ್ಯವಸ್ಥೆ ಮಾಡಲು ಈ ಸಮಿತಿ ಸೂಚಿಸಿದೆ. ಈ ಕೆಲಸವನ್ನು ಜಿಲ್ಲಾ ರಿಕ್ರುಟ್‌ಮೆಂಟ್ ಬೋರ್ಡ್ ಮಾಡಬೇಕೆಂದೂ ಸೂಚಿಸಿದೆ.

o o o

ಕೇರಳ ಸರ್ಕಾರವು ಕಡಮೆ ಸಂಬಳದ ನೌಕರರಿಗೆ ಹೆಚ್ಚು ಸಂಬಳ ನೀಡಬೇಕೆಂಬ ನೀತಿಗನುಸರಿಸಿ ಖಾಸಗಿ ಅಪ್ಪರ್ ಪ್ರೈಮರಿ ಮತ್ತು ಸೆಕಂಡರಿ ಶಾಲೆಗಳ ಅಧ್ಯಾಪಕರಿಗೆ ಅಡ್‌ಹಾಕ್ ಹೆಚ್ಚಳವೆಂದು 5 ರೂಪಾಯಿಗಳ ತುಟ್ಟಿಭತ್ತೆ ನೀಡಿದೆ.

ಇತ್ತೀಚೆಗಿನ ವೇತನ ಪುನರ್ಪರಿಶೀಲನೆಗನುಸರಿಸಿ ತಿಂಗಳಿಗೆ 55 ರೂಪಾಯಿಗಳಿಗಿಂತ ಹೆಚ್ಚು ಸಂಬಳ ಇಲ್ಲದವರಿಗೆಲ್ಲ 5 ರೂಪಾಯಿ ತುಟ್ಟಿಭತ್ಯವನ್ನೂ ಮತ್ತು 55 ರೂ. ಮೇಲೆ, 60 ರೂ.ಗಳೊಳಗೆ ಸಂಬಳ ಪಡೆಯುವವರಿಗೂ ತುಟ್ಟಿಭತ್ಯವನ್ನು 10 ರೂಗಳಿಗೆ ಹೆಚ್ಚಿಸಿದೆ.

ಗದಗಿನಲ್ಲಿ ವಿದ್ಯುತ್‌ಶಕ್ತಿ ರಾಷ್ಟ್ರೀಕರಣ ಸಮ್ಮೇಲನ

(೫ನೇ ಪುಟದಿಂದ)

ರುವರು. ಇವರ ಈ ಧೋರಣೆಯಿಂದ ಜನರು ಬೇಸತ್ತಿದ್ದಾರೆ. ಆದರೆ ಸರಕಾರದವರು ಜನರ ಮತ್ತು ಮುನಿಸಿಪಾಲಿಟಿಗಳ ಸಂಕಷ್ಟಗಳನ್ನು ದೂರಮಾಡಲಿಕ್ಕೆ ಮುಂದೆ ಬರುವುದಿಲ್ಲ. ಒಂದು ಯೂನಿಟ್ಟಿಗೆ ಅಥಣಿಯಲ್ಲಿ 0–14–0, ಬಿಜಾಪುರದಲ್ಲಿ 0-8-0, ಸಿರಸಿಯಲ್ಲಿ 0-10-0 ಚಾರ್ಜು ಮಾಡಿ, ಖಾಸಗಿ ಲೈಸನ್ಸ್‌ದಾರರು ನಾಗರೀಕರ ಹಣವನ್ನು ದೋಚಿಕೊಳ್ಳುತ್ತಿರುವರು.

ಉತ್ತರ ಕರ್ನಾಟಕವು ನೈಸರ್ಗಿಕ ಸಂಪತ್ತಿನಿಂದ ತುಂಬಿ ತುಳುಕುತ್ತಿದೆ, ಅರಣ್ಯ ಸಂಪತ್ತು, ಹರಿಯುವ ಹೊಳೆಗಳು, ಉದ್ಯೋಗ ಬೆಳವಣಿಗೆಯ ಅವಕಾಶಗಳು ಬೇಕಾದಷ್ಟಿದೆ ಆದರೆ ಇಲ್ಲಿ ಒಂದೂ ಜಲವಿದ್ಯುದಾಗರವು ಇಲ್ಲದಿರುವುದು ಶೋಚನೀಯ ಸಂಗತಿ. ಇದ್ದ ವಿದ್ಯುತಶಕ್ತಿಯೂ ಯೋಗ್ಯ ಬೆಲೆಯಲ್ಲಿ ಸರಿಯಾಗಿ ಒದಗಿಸಲ್ಪಡದಿರುವುದರಿಂದ, ಅಪಾರ ನೈಸರ್ಗಿಕ ಸಂಪತ್ತಿದ್ದರೂ ಕೂಡ, ಉತ್ತರ ಕರ್ನಾಟಕದ ಬೆಳವಣಿಗೆ ಮುಂದರಿಯದಾಗಿದೆ.

ಮೈಸೂರಿನಲ್ಲಿ ವಿದ್ಯುತ್ ಶಕ್ತಿಯ ಅಭಿವೃದ್ಧಿ ಯೋಜನೆಗಳಿಗಾಗಿ ದ್ವಿತೀಯ ಯೋಜನೆಯಲ್ಲಿ ಒಟ್ಟು 29 ಕೋಟಿ, 49 ಲಕ್ಷ ರೂಪಾಯಿ ತೆಗೆದಿಡಲಾಗಿದೆ. ಇದರಲ್ಲಿ ಹಳೇ ಮೈಸೂರು ಯೋಜನೆಗಳಿಗೆ 23 ಕೋಟಿ 37ಲಕ್ಷ ರೂಪಾಯಿ ಕಾಯ್ದಿರಿಸಲಾಗಿದ್ದು, ಸೇರ್ಪಡೆಯಾದ ಉಳಿದೆಲ್ಲ ಭಾಗಗಳಿಗೆ ಕೇವಲ 612ಲಕ್ಷ ರೂಪಾಯಿ ತೆಗೆದಿಡಲಾಗಿದೆ. ಗ್ರಾಮಾಂತರ ವಿದ್ಯುತ್‌ಶಕ್ತಿ ಪೂರೈಕೆಗಾಗಿ ಹಳೇ ಮೈಸೂರಿಗೆ 250 ಲಕ್ಷ ರೂಪಾಯಿ, ಮುಂಬಯಿ ಕರ್ನಾಟಕಕ್ಕೆ ಕೇವಲ 4 ಲಕ್ಷ ರೂಪಾಯಿ ಮಾತ್ರ. ಈ ತರದ ಮಲತಾಯಿ ದೃಷ್ಟಿಯಿಂದಾಗಿ ಉತ್ತರ ಕರ್ನಾಟಕ ಮತ್ತು ಹೈದರಾಬಾದ ಪ್ರದೇಶ ಹಿಂದುಳಿಯ ಹತ್ತಿದೆ.

ಮೈಸೂರು ಸರ್ಕಾರದವರು, ವಿದ್ಯುತ ಪೂರೈಕೆಯ ತನ್ನ ದೃಷ್ಟಿಕೋನವನ್ನು ಬದಲಿಸಬೇಕು. ಉತ್ತರ ಕರ್ನಾಟಕದ ನಗರಸಭೆ ಮತ್ತು ಬಳಕೆಗಾರರ ಗೋಳನ್ನು ವಿಚಾರಿಸಲು ಕೂಡಲೇ ಮುಂದೆ ಬರಬೇಕು. ಗದಗಿನಲ್ಲಿ ಈ ಪರಿಷತ್ತನ್ನು ಉದ್ಘಾಟನೆ ಮಾಡುತ್ತಾ ಶ್ರೀ ಚೆನಬಸಪ್ಪನವರು "ಖಾಸಗೀ ಲೈಸನ್ಸ್‌ದಾರರ ವಿರುದ್ಧ ತಮ್ಮ ಕಡೆ ಬರುತ್ತಿರುವುದರಲ್ಲಿ ಸ್ವಲ್ಪ ತಥ್ಯಾಂಶವಿದೆಂದೂ, ಆದರೆ ವಿದ್ಯುತ ಪೂರೈಕೆ ಮತ್ತು ವಿತರಣೆ ರಾಷ್ಟ್ರೀಕರಣ ಮಾಡಬೇಕೆಂಬ ಬೇಡಿಕೆಯ ಅರ್ಥ ಮಾತ್ರ ತಮಗೆ ಸರಿಗಾಣುವುದಿಲ್ಲವೆಂದೂ" ಹೇಳಿದರು. ಇಡೀ ಮೈಸೂರು ರಾಜ್ಯದಲ್ಲಿ ವಿದ್ಯುತ್ ಪೂರೈಕೆಯ ಜವಾಬ್ದಾರಿ ವಹಿಸಿರುವ, ಮಂತ್ರಿಯವರಿಗೆ ಇಲ್ಲಿ ಉಳಿದಿರುವ 16 ಕೇಂದ್ರಗಳನ್ನು ತಮ್ಮ ವಶಪಡಿಸಿಕೊಂಡು, ಜನರ ಸಂಕಷ್ಟಗಳನ್ನು ದೂರಮಾಡುವುದರ ಅರ್ಥವಾಗುವುದಿಲ್ಲವಂದರೆ ಆಶ್ಚರ್ಯವೇ ಸರಿ.

ಹಳೇ ಮೈಸೂರು ಸರಕಾರಕ್ಕಿಂತ ಹೊಸ ಮೈಸೂರು ಸರಕಾರ ಹೆಚ್ಚು ಬುದ್ಧಿವಂತರಾಗುತ್ತಿರುವಂತೆ ಕಂಡುಬರುತ್ತದೆ. ಸದ್ಯ ಸರಕಾರದ ಹತ್ತರ, ಸಾಕಷ್ಟು ನೌಕರದಾರರೂ, ಇತರ ಆಡಳಿತೆ ವ್ಯವಸ್ಥೆಯೂ ಇರುವುದರಿಂದ ಉತ್ತರ ಕರ್ನಾಟಕದ ಉತ್ಪಾದನೆ ಮತ್ತು ವಿತರಣೆಯ ಜವಾಬ್ದಾರಿ ವಹಿಸಲಿಕ್ಕೆ ಯಾವ ತರದ ಆತಂಕವೂ ಇಲ್ಲ. ಅತಿ ಸುಲಭದಲ್ಲಿ ಈ ಕೆಲಸ ಸಾಧಿಸಬಹುದು. ಆದರೆ ಇದಕ್ಕೆ ಸರಕಾರದ ಮನಸ್ಸು ಬೇಕು. ಖಾಸಗೀ ಲ್ಯಾಸನ್ಸದಾರರನ್ನು ಅಸಂತುಷ್ಟಿಗೊಳಿಸಲು ಸರಕಾರ ತಯಾರಿಲ್ಲ. ಜನರ ಬೇಡಿಕೆಗಳನ್ನು ಕಡೆಗಣಿಸುತ್ತಿರುವ ಸರಕಾರ ಎಂದೂ ಬಾಳಲಾರದು.

ನವ ಮೈಸೂರು ರಾಜ್ಯ ರಚನೆಯಾಗುವ ಮುಂಚಿತವಾಗಿ ಮೈಸೂರು ಪ್ರಾಂತ ವಿದ್ಯುತ್ ಪೂರೈಕೆಯಲ್ಲಿ ಪ್ರಥಮ ಸ್ಥಾನ ಗಳಿಸಿತ್ತು. ಮೈಸೂರು ಸರಕಾರದ ನೀತಿಯಿಂದಾಗಿ, ಈಗ ನಮ್ಮ ರಾಜ್ಯ ಮೂರನೇ ಸ್ಥಾನದಲ್ಲಿದ್ದು, ಮೊದಲನೇ ಸ್ಥಾನ ಮದ್ರಾಸಿಗೂ, ಎರಡನೇ ಸ್ಥಾನ ಆಂಧ್ರಕ್ಕೂ ಬಿಟ್ಟುಕೊಟ್ಟಿದೆ.

ಎರಡು ದಿವಸದ ಸಮ್ಮೇಳನದಲ್ಲಿ ದೀರ್ಘವಾದ ಚರ್ಚೆಯಾದ ನಂತರ ಈ ಕೆಳಗಿನ ಠರಾವುಗಳು ಪಾಸಾದವು.

1) ಉತ್ತರ ಕರ್ನಾಟಕದ ವಿದ್ಯುತ್ ಪೂರೈಕೆ ಮತ್ತು ವಿತರಣೆಯನ್ನು ವಶಪಡಿಸಿಕೊಳ್ಳಲು, ಮದ್ರಾಸು ಮತ್ತು ಆಂಧ್ರ ಪ್ರದೇಶ ಸರಕಾರಗಳು ಮಾಡಿಕೊಂಡಂತೆ ಯೋಗ್ಯ ಕಾನೂನನ್ನು ಪಾಸು ಮಾಡಬೇಕು.

2) ಬಳಕೆಗಾರರ ತಕರಾರುಗಳನ್ನು ದೂರ ಮಾಡುವುದರ ಸಲುವಾಗಿ, ಅವಶ್ಯಕಂಡ ಮತ್ತು ನಗರಸಭೆಗಳು ಠರಾವು ಮಾಡಿ ಕಳಿಸಿದ, ಖಾಸಗಿ ಲ್ಯಾಸನ್ಸ್‌ದಾರರ ಲ್ಯಾಸನ್ಸುಗಳನ್ನು ರದ್ದುಪಡಿಸಿ, ರಾಜ್ಯದ ಇಲೆಕ್ಟ್ರಿಕ್ ಬೋರ್ಡಿನವರು, ಅಂಥ ಪೂರೈಕೆ ಕೇಂದ್ರಗಳನ್ನು ವಶಪಡಿಸಿಕೊಳ್ಳುವಂತೆ ಮಾಡಬೇಕು.

3) ತಮ್ಮ ಸಂಕಷ್ಟಗಳನ್ನು ಯೋಗ್ಯ ರೀತಿಯಲ್ಲಿ ಮಂಡಿಸಿ, ಮುಂದಿನ ಚಳುವಳಿ ನಡೆಸುವುದರ ಸಲುವಾಗಿ ಉತ್ತರ ಕರ್ನಾಟಕ ವಿದ್ಯುತ್ ಬಳಕೆಗಾರರ ಫೆಡರೇಶನನ್ನು ರಚನೆ ಮಾಡಬೇಕು. ಇದರ ಸಲುವಾಗಿ ಡಾ|| ಗೋಡಬೋಲೆಯವರ ಅಧ್ಯಕ್ಷತೆಯಲ್ಲಿ ಒಂದು ಎಡ್‌ಹಾಕ್ ಸಮಿತಿಯನ್ನು ರಚಿಸಲಾಯಿತು.

ಸರಕಾರದವರು ಉತ್ತರ ಕರ್ನಾಟಕದ ವಿದ್ಯುತ್ ಬಳಕೆಗಾರರ ಅವಶ್ಯಕತೆಗಳನ್ನು ಕಂಡುಹಿಡಿದು, ಈ ಭಾಗದ ಉತ್ಪಾದನಾ ಕೇಂದ್ರಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಈ ಭಾಗದ ಬೆಳವಣಿಗೆಗೆ ಸಹಾಯ ಮಾಡುವುದು ಅತ್ಯಗತ್ಯ.

ಬಾಗಲಕೋಟೆ ನಗರ ಸಭೆಯಲ್ಲಿ ದುರಾಡಳಿತೆ

ಬಾಗಲಕೋಟೆ ನಗರ ಸಭೆಯಲ್ಲಿ ಅಧಿಕಾರಾರೂಢ ಪಕ್ಷದವರು ನಗರ ಸಭೆಯಲ್ಲಿ ದುಡಿಯುತ್ತಿರುವ ನೌಕರದಾರರಲ್ಲಿ ೨೦, ೨೨ ವರ್ಷ ಸರ್ವಿಸ್ ಆದಂಥ ಕೆಲವು ನೌಕರರನ್ನು ಯಾವದೇ ಕಾರಣವಿಲ್ಲದೇ ತಾ. ೧೨—೮—೫೮ರಿಂದ ಕಡಿಮೆ ಮಾಡಲಾಗುವುದು ಅಂತ ನೋಟೀಸು ಕೊಟ್ಟಿದ್ದಾರೆ. ಆದರೆ ೪—೬ ತಿಂಗಳುಗಳಲ್ಲಿಯೇ ಸರ್ವೀಸು ಮುಗಿದು "ರಿಟಾಯರ್ಡ್" ಆಗಬೇಕಾಗಿರುವಂಥವರಿಗೆ ನೋಟೀಸು ವಗೈರೆ ಏನೂ ಕೊಟ್ಟಿರುವುದಿಲ್ಲ. ಹಾಗೂ ಮನೆಗಳ ಕರ ವಸೂಲು ಮಾಡುವ ಶಾಖೆಯಲ್ಲಿ ಒಂದು "ಹೌಸ್ ಟ್ಯಾಕ್ಸ್ ಸುಪರಿಂಟೆಂಡೆಂಟ್" ಜಾಗೆಯ ನೇಮಣೂಕಿ ಮಾಡುವ ಕಾಲಕ್ಕೆ ೨೦—೨೪ ವರ್ಷ ಸರ್ವಿಸ್ ಮಾಡಿ ಸಾಕಷ್ಟು ಅನುಭವವುಳ್ಳ ಯೋಗ್ಯ ಶೈಕ್ಷಣಿಕ ಅರ್ಹತೆ ಇದ್ದಂಥವರನ್ನು ಬಡತಿ ಕೊಟ್ಟು ನೇಮಿಸಲಾರದೇ ಒಬ್ಬ ಹೊಸಬರನ್ನು ನೇಮಣೂಕಿ ಮಾಡಿದ್ದಾರೆ.

ಈಗಿನ ನಗರ ಸಭೆಯ ಅಧ್ಯಕ್ಷರು ಕೆಲವು ತಿಂಗಳುಗಳ ಹಿಂದೆ ಸಾಧಾರಣ ಸಭೆಯ ಮಂಜೂರಿ ಇಲ್ಲದೆನೇ, ಅಜಮಾಸ ರೂ. 47,000ಗಳಷ್ಟು ಹಣ ಖರ್ಚು ಹಾಕಿದ್ದರಂತೆ: ಇಷ್ಟು ಹಣ ಖರ್ಚು ಹಾಕಿದ್ದಕ್ಕಾಗಿ ಸಾಧಾರಣ ಸಭೆಯ ಮಂಜೂರಿ ಪಡಕೊಳ್ಳಲು ವ, ತಮ್ಮ ಬಹುಮತ ಮಾಡಿಕೊಳ್ಳಲು ಸಾವಿರಾರು ರೂಪಾಯಿ ಖರ್ಚು ಮಾಡಿ ಈ ಅಧ್ಯಕ್ಷರು ತಮ್ಮ ಬಹುಮತ ಮಾಡಿಕೊಂಡಿದ್ದಾರಂತೆ. ಇದಕ್ಕಾಗಿ ಮೇಲಿನಂಥ ಕ್ರಮಗಳನ್ನು ಕೊಳ್ಳುತ್ತಿದ್ದಾರೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಹಾಗೂ ಅಧಿಕಾರಾರೂಢ ಪಕ್ಷದವರು ತಮ್ಮ ಸ್ವಂತ ಹಿತ ಸಾಧಿಸುವುವಂತಾಗಿ ಸಾಕಷ್ಟು ದುರಾಡಳಿತೆ-ಲಂಚಗೂಳಿತನ ನಗರಸಭೆಯಲ್ಲಿ ನಡೆದದೆ ಅಂತಾ ಸಾರ್ವಜನಿಕರು ಮಾತನಾಡುತ್ತಿದ್ದಾರೆ. ಇದು ಸಂತೆಯ ಮಾತಾಗಿಬಿಟ್ಟದೆ.

ಬಾಗಲಕೋಟೆಯು 50,000 ಜನ ಸಂಖ್ಯೆಯುಳ್ಳ ಔದ್ಯೋಗಿಕ ವ ವ್ಯಾಪಾರಿ ಕೇಂದ್ರವಿದ್ದು ನಗರ ಸುಧಾರಣೆಯು ಯಾವುದೇ ವಿಶಿಷ್ಟ ಕಾರ್ಯಗಳು ಆಗಿರುವುದಿಲ್ಲ. ನಗರ ಸುಧಾರಣೆಯ ಕಡೆಗೆ ಸ್ವಲ್ಪ ಸಹಾ ಲಕ್ಷ್ಯ ಕೊಡಲಾರದೇ ಅಧಿಕಾರರೂಢ ಪಕ್ಷದವರು ನಗರಸಭೆಯ ಬಡ ನೌಕರರ ಮೇಲೆ ಮಾಡುತ್ತಿರುವ ಈ ತರದ ಅನ್ಯಾಯ, ಪಕ್ಷಪಾತತನ, ದುರಾಡಳಿತೆಯ ಕುರಿತು ಸಂಬಂಧಿಸಿದ ಮೇಲಾಧಿಕಾರಿಗಳು ಸ್ಥಾನಿಕ ತಪಾಸಣೆ ಮಾಡಿ ನಗರ ಸಭೆಯಲ್ಲಿ ಯೋಗ್ಯ ಕ್ರಮಗಳನ್ನು ಕೈಕೊಳ್ಳಬೇಕು.

ಮಹಾದೇವಪ್ಪ ಮುರಗೋಡರ ವಿರುದ್ಧ

ಪೋಲೀಸ್ ಅಧಿಕಾರಿಯ ಅಪಪ್ರಚಾರ

ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದಾಗ ಕರ್ನಾಟಕದಲ್ಲಿ ಕಾಂಗ್ರೆಸ್ ಸಂಘಟಿಸಲು ಸಹಾಯ ಮಾಡಿ, ಸ್ವಾತಂತ್ರ್ಯ ಹೋರಾಟದಲ್ಲಿ ಹಲವಾರು ಸಲ ಜೈಲುವಾಸ ಅನುಭವಿಸಿ ಕರ್ನಾಟಕದ "ನಾನಾ ಪಾಟೀಲ"ರೆನಿಸಿಕೊಂಡಿರುವ ಶ್ರೀ ಮಹಾದೇವಪ್ಪ ಮುರುಗೋಡ ಇವರು, ಕಾಂಗ್ರೆಸ್ಸಿನ ಜನತಾ ವಿರೋಧಿ ನೀತಿಯನ್ನು ಖಂಡಿಸಿ, ಅದಕ್ಕೆ ರಾಜೀನಾಮೆ ಕೊಟ್ಟು ವಿರೋಧಿ ಪಕ್ಷ ಸಂಘಟನೆಯ ಕೆಲಸವನ್ನು ಹಲವಾರು ವರ್ಷಗಳಿಂದ ಮಾಡುತ್ತಿರುವರು. ಕರ್ನಾಟಕ ಏಕೀಕರಣ ಚಳುವಳಿ, ಗೋವಾ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ್ದರು. 1956ರ ಚುನಾವಣೆಯಲ್ಲಿ ಈಗ ಮೈಸೂರಿನ ಮುಖ್ಯ ಮಂತ್ರಿಯಾಗಿರುವ ಶ್ರೀ ಬಿ. ಡಿ. ಜತ್ತಿಯವರ ವಿರುದ್ಧ ಸ್ಪರ್ಧಿಸಿ ಕೆಲವು ನೂರು ಓಟುಗಳಿಂದ ಸೋಲಿಸಲ್ಪಟ್ಟರು. ಶ್ರೀ ಜತ್ತಿಯವರ ವಿರುದ್ಧ ಮಾಡಿರುವ ಚುನಾವಣಾ ಅರ್ಜಿ ಹಾಕಿದ್ದರು. ಬಿಜಾಪುರದ ಡಿ. ವ್ಯಾ. ಎಸ್. ಪಿ.ಯವರಾದ ಶ್ರೀ ಬಿ. ಎಂ. ಪಾಟೀಲರು ಇಂಚಗೇರಿ ಮಠಕ್ಕೆ ಹೋಗಿ "ಮಹಾದೇವಪ್ಪನವರು ಗೂಂಡಾ ಇರುವರೆಂದೂ, ಇವರು ಅಪಾಯಕಾರಿ ಮನುಷ್ಯರಿರುವರೆಂದೂ ಕಾರಣ ಯಾರೂ ಇವರಿಗೆ ಬೆಂಬಲ ಕೊಡಬಾರದೆಂದೂ" ಇವರ ವಿರುದ್ಧ ಏನಾದರೂ ತಕರಾರಿದ್ದರೆ ಹೇಳಬೇಕೆಂದೂ ಹೇಳಿದರಂತೆ. ಒಬ್ಬ ಜನಪ್ರಿಯ ಮುಂಡರ ವಿರುದ್ಧ ಪೋಲೀಸು ಅಧಿಕಾರಿ ಬಹಿರಂಗವಾಗಿ ಈ ರೀತಿ ಆರೋಪ ಹೊರಿಸುವುದು ಶುದ್ಧ ಅನ್ಯಾಯ. ಪೋಲೀಸು ಅಧಿಕಾರಿ ಪಾಟೀಲರ ಈ ಕೃತಿಯನ್ನು ಜನರು ಪ್ರತಿಭಟಿಸಬೇಕು.

ಬಿಜಾಪುರ—

ಕೇರಳ ಸರಕಾರಕ್ಕೆ ಬೆಂಬಲ

ಜನಹಿತಕರವಾದ, ಮತ್ತು ಪುರೋಗಾಮಿಯಾದ, ಶಿಕ್ಷಣ ಮಸೂದೆ, ಹೊಲ ಸಾಗುವಳಿ ಕಾಯಿದೆ, ಪಡುಭೂಮಿ ಹಂಚುವ, ಡೌರಿ ಸಂಬಂಧದ ಮಸೂದೆಗಳನ್ನು ಪಾಸು ಮಾಡಿ, ಪೋಲೀಸರ ಅಧಿಕಾರ ಕಡಿಮೆ ಮಾಡಿ, ವಿರೋಧ ಪಕ್ಷದವರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ನಿಜವಾದ ಪ್ರಜಾಪ್ರಭುತ್ವ ರೀತಿಯಲ್ಲಿ ಕಳೆದ 16 ತಿಂಗಳುಗಳಿಂದ ರಾಜ್ಯ ನಡೆಸುತ್ತ ಜನತೆಯ ವಿಶ್ವಾಸ ಗಳಿಸಿರುವ ಕೇರಳ ಸರಕಾರದ ವಿರುದ್ಧ ಅಪಪ್ರಚಾರ ನಡೆಸುತ್ತಿರುವ ಕಾಂಗ್ರೆಸ್, ಪಿ. ಎಸ್. ಪಿ. ಮೊದಲಾದ ಪಕ್ಷಗಳ ಕೃತಿಗಳನ್ನು ಖಂಡಿಸಿ, ಕೇರಳ ಸರಕಾರಕ್ಕೆ ಸಂಪೂರ್ಣ ಬೆಂಬಲ ನೀಡುವ ಠರಾವು, ಬಿಜಾಪುರ ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ 5—9—58ಕ್ಕೆ ಕರೆದ ಸಾರ್ವಜನಿಕ ಸಭೆಯಲ್ಲಿ ಪಾಸು ಮಾಡಲಾಯಿತು. ಸಭೆಯ ಪ್ರಾರಂಭದಲ್ಲಿ, ಕರ್ನಾಟಕ ಏಕೀಕರಣದ ಸಲುವಾಗಿ ಸತತ ದುಡಿಯುತ್ತ ಬಂದಿದ್ದ, ಕರ್ನಾಟಕದಲ್ಲಿ ವಣಿಕ ಸಂಘದ ರಚನೆಗೆ ಕಾರಣೀಭೂತರಾದ, ಬಾಗಲಕೋಟೆಯ ಪ್ರಸಿದ್ಧ ವ್ಯಕ್ತಿ ಜಂಗಿನ ಮುರಿಗಯ್ಯನವರ ನಿಧನದ ಸಲುವಾಗಿ ದುಃಖ ಸೂಚನೆ ಪ್ರದರ್ಶನ ಮಾಡಲಾಯಿತು.

ಉತ್ತರ ಕರ್ನಾಟಕದ ಪೋಲೀಸ್ ಖಾತೆಯವರ ಅಲಾವನ್ಸುಗಳನ್ನು ಕಡಿಮೆ ಮಾಡಿದ್ದನ್ನು ಖಂಡಿಸಿ, ಮೈಸೂರು ಸರಕಾರದವರು, ಇವುಗಳಲ್ಲಿ ಕಡಿತ ಮಾಡಬಾರದೆಂದು ಕೇಳಿಕೊಳ್ಳುವ, ಮುನಿಸಿಪಲ ಕೆಲಸಗಾರರ ಸಂಪಿಗೆ ಸಂಪೂರ್ಣ ಬೆಂಬಲ ನೀಡುವ, ಮುನಿಸಿಪಾಲಿಟಿಯವರು ಸಾರ್ವಜನಿಕ ವಾಚನಾಲಯದ ಕಟ್ಟಡದ ಮೇಲೆ ಹೇರಿರುವ ಮನೆ ಪಟ್ಟಿಯನ್ನು ರದ್ದು ಮಾಡಬೇಕೆಂದು ಕೇಳಿಕೊಳ್ಳುವ, ಮೈಸೂರು ಸರಕಾರದವರು, ಹಿಂದುಳಿದ ವರ್ಗದ ಯಾದಿಯಲ್ಲಿ, ಅಂಬಿಗ, ಕಬ್ಬಲಿಗ, ನಾಟಿಕಾರ, ಗಂಗಿನ ಮಕ್ಕಳು, ಸುಣಗಾರ, ಮಹಾದೇವ ಕೋಳಿ ಮೊದಲಾದವರನ್ನೂ ಸೇರಿಸಿ ಇವರಿಗೂ ಶಿಕ್ಷಣ ಮತ್ತು ನೌಕರಿ ಸವಲತ್ತುಗಳು ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುವ, ಬಿಜಾಪುರ ಮುನಿಸಿಪಾಲಿಟಿಯ ಜಕಾತಿಖಾತೆಯ ನೌಕರದಾರರಿಗೆ ಓವರಟಾಯಿಮ್ ಅಲಾವನ್ಸ್ ಕೊಡಬೇಕೆನ್ನುವ, ಸ್ಟೇಶನ್ ಬ್ಲ್ಯಾಕ್ ರೋಡನ್ನು ಮುನಿಸಿಪಾಲಿಟಿಯವರು ಕೂಡಲೇ ಸಿಮೆಂಟ್ ಕಾಂಕ್ರೀಟ ಮಾಡಬೇಕೆನ್ನುವ ಠರಾವುಗಳು ಅಂಗೀಕಾರವಾದುವು. ಶ್ರೀ ಎನ್. ಕೆ. ಉಪಾಧ್ಯಾಯ ಮತ್ತು ಬಿ. ವೈ. ಕಲಾದಗಿಯವರು ಭಾಷಣ ಮಾಡಿದರು.

ಪ್ರಾಂತೀಯ ಸುದ್ದಿ ಸಂಗ್ರಹ

ಬಾಗಲಕೋಟೆ ಟ್ರಕ್ಕಿನವರ ಜಯ

ಶ್ರೀ ಸವದತ್ತಿ ಫೌಜದಾರರು ಸಸ್ಪೆಂಡ್ ಆದರು

ಕೆಲವು ದಿನಗಳ ಹಿಂದೆ ಇಲ್ಲಿಯ ಒಂದು ಟ್ರಕ್ ನಂ. MYZ 621 ಇದರ ಮಾಲಿಕರಾದ ಶ್ರೀ ಹರಿಹರ ಎಂಬವರನ್ನು ಇಲ್ಲಿಯ ಸಿಟಿ, ಅಡಿಶನಲ್, ಫೌಜದಾರರಾದ ಸವದತ್ತಿಯವರು ಮಾಮೂಲು ಕೊಡಲಿಲ್ಲವೆಂದು ಅನ್ಯಾಯದಿಂದ, ದಬ್ಬಾಳಿಕೆ, ದಾಂಡಗಾಯಿತನಮಾಡಿ ದಾರು ಕುಡಿದಿದ್ದಾನೆಂದು ಹಿಡಿದು ಟ್ರಕ್ಕು ಸಹ ಶ್ರೀ ಹರಿಹರರನ್ನು ಲಾಕಪ್ಪಿನಲ್ಲಿಹಾಕಿದ್ದರು. ಶ್ರೀ ಹರಿಹರರು ಶೀಲವಂತರೂ, ಪ್ರಾಮಾಣಿಕರೂ ಇದ್ದು ಇವರ ಮೇಲೆ ಆದ ಅನ್ಯಾಯ ವ ದಬ್ಬಾಳಿಕೆಯ ವಿರುದ್ಧ ಟ್ರಕ್ಕಿನವರು, ಸಾರ್ವಜನಿಕರು ಸ್ಥಾನಿಕ ಕಮ್ಯೂನಿಸ್ಟಪಾರ್ಟಿಯವರು, ಮೇಲಾಧಿಕಾರಿಗಳ ಕಡೆಗೆ ದೂರಿಕೊಳ್ಳಲಾಗಿ, ಚೌಕಶಿಯಲ್ಲಿ ಶ್ರೀ ಸವದತ್ತಿ ಫೌಜದಾರ ಶಂಕರ ಎಂಬ ಕಾನ್‌ಸ್ಟೇಬಲನು ಅಪರಾಧಿ ಎಂದು ಸಿದ್ಧವಾಗಿ ಸಸ್ಪೆಂಡ ಮಾಡಲ್ಪಟ್ಟಿದ್ದಾರೆ.

ತಾತ್ಪೂರ್ತಿಕವಾಗಿ ಟ್ರಕ್ಕಿನವರಿಗೆ ನ್ಯಾಯ ಸಿಕ್ಕಿದ್ದರೂ ಸಹ ಇನ್ನು ಮುಂದೆ ಈ ಪ್ರಕರಣದಲ್ಲಿ ಚೌಕಶಿ ಮಾಡುವ ಮೇಲಾಧಿಕಾರಿಗಳು ನಿಷ್ಪಕ್ಷಪಾತತನದಿಂದ ಚೌಕಶಿಮಾಡಿ ಟ್ರಕ್ಕಿನವರಿಗೆ ನ್ಯಾಯ ಕೊಡಿಸಬೇಕೆಂದು ಸಾರ್ವಜನಿಕರ ಪರವಾಗಿ ಕಮ್ಯೂನಿಸ್ಟಪಾರ್ಟಿಯು ಕೇಳಿಕೊಳ್ಳುತ್ತದೆ.

ಹಾವೇರಿಯಲ್ಲಿ

ಕಮ್ಯೂನಿಸ್ಟ್ ಪಾರ್ಟಿ ಸಭೆ

ಕಾಂ॥ ಬಿ. ವಿ. ಕಕ್ಕಿಲ್ಲಾಯರು ಹಾವೇರಿಗೆ ಸೆಪ್ಟಂಬರ್ 10ರಂದು ಆಗಮಿಸಿದರು. ತಾಲೂಕಿನ ರೈತರು ಕೂಲಿಕಾರರ ಪ್ರಮುಖ ಕಾರ್ಯಕರ್ತರು ಹಾಗೂ ಹಾವೇರಿ ಮುನಿಸಿಪಾಲ್ಟಿ ಹ್ಯಾಸ್ಕೂಲಿನ ಹೆಡ್ ಮಾಸ್ತರ್ ಶ್ರೀ ಎಚ್. ಜಿ. ಬೆಂಗೇರಿಯವರು ಹೂವಿನ ಹಾರಗಳಿಂದ ಸ್ವಾಗತ ಮಾಡಿ ಕಮ್ಯೂನಿಸ್ಟ್ ಪಾರ್ಟಿಯ ಜಯಘೋಷ ಮಾಡಿ, ಸ್ಟೇಷನ್ನಿನಿಂದ ನಗರದ ಪ್ರಮುಖ ಬೀದಿಗಳಲ್ಲಿ ಸುಮಾರು ೫೦೦ ಜನ ರೈತ—ಕೂಲಿಕಾರರೊಂದಿಗೆ ಮೆರವಣಿಗೆ ನಡೆಯಿತು.

ವಕೀಲರೂ ಮಾಜಿ ಕೆ. ಪಿ. ಸಿ. ಸಿ. ಪ್ರೆಸಿಡೆಂಟರೂ ಆದ ಶ್ರೀ ಹೊಸಮನಿ ಸಿದ್ದಪ್ಪನವರನ್ನು ಕಾಂ॥ ಕಕ್ಕಿಲ್ಲಾಯರವರು ಭೇಟಿ ಮಾಡಿದರು.

ಮಧ್ಯಾಹ್ನ ೨ ಘಂಟೆಗೆ ನಡುವಿನ ಮಠದ ವ್ಯಾಯಾಮ ಶಾಲೆಯಲ್ಲಿ ಹಾವೇರಿ ತಾಲೂಕಾ ಕಾರ್ಯಕರ್ತರ ಸಭೆ ನಡೆಯಿತು. ಕಾರ್ಯಕರ್ತರು ಅಜಮಾಸು 300 ಜನ ಬಂದಿದ್ದರು. ಕಾಮ್ರೇಡ್ ಬಿ. ವಿ. ಕಕ್ಕಿಲ್ಲಾಯರು ಕಾರ್ಯಕರ್ತರನ್ನು ಉದ್ದೇಶಿಸಿ ಕಮ್ಯೂನಿಸ್ಟ್ ಪಾರ್ಟಿಯ ಉದ್ದೇಶ ಹಾಗೂ ಸಂಘಟನೆಯ ಅವಶ್ಯಕತೆ ಕುರಿತು ಮಾತನಾಡಿದರು.

ಸಾಯಂಕಾಲ ೬ ಘಂಟೆಗೆ ಹಾವೇರಿಯಿಂದ ೧ ಮೈಲಿನಲ್ಲಿರುವ ಎತ್ತಿನಹಳ್ಳಿಯಲ್ಲಿ ರೈತರ ಪರವಾಗಿ ಬಹಿರಂಗ ಸಭೆ ಸೇರಿತು. ಸಭೆಯ ಅಧ್ಯಕ್ಷತೆಯನ್ನು ಎತ್ತಿನಹಳ್ಳಿಯ ತರುಣ ಕಾರ್ಯಕರ್ತ ರೈತ ಶ್ರೀ ಕಿತ್ತೂರವರು ವಹಿಸಿದ್ದರು. ಮೊದಲಿಗೆ ಪ್ರಮುಖ ಕಾರ್ಯಕರ್ತರಾದ ಕಾಂ॥ ವಿ. ಪಂಚಾಕ್ಷರಿಯವರು ಕಮ್ಯೂನಿಸ್ಟ್ ಪಾರ್ಟಿಯ ಧ್ಯೇಯ ಧೋರಣೆಯನ್ನು ಹೇಳಿದ ನಂತರ ಕಾಂ॥ ಕಕ್ಕಿಲ್ಲಾಯರು ರೈತ ಸಂಘದ ಅವಶ್ಯಕತೆ ಹಾಗೂ ಕಾಂಗ್ರೆಸ್ಸಿನ ಪೊಳ್ಳು ಘೋಷಣೆ ಹಾಗೂ ಕೇರಳದಲ್ಲಿ ನಡೆಯುತ್ತಿರುವ ರೈತರ ಮುನ್ನಡೆಯನ್ನು ಕುರಿತು ಭಾಷಣ ಮಾಡಿದರು.

ರಾತ್ರಿ ೯॥ ಘಂಟೆಗೆ ಹಾವೇರಿಯಲ್ಲಿ ಸುಭಾಸ್ ಸರ್ಕಲಿನಲ್ಲಿ ಮೊದಲೇ ಪ್ರಜಾ

(೮ನೇ ಪುಟ ನೋಡಿ)

ಕನಿಷ್ಟಕೂಲಿ ಮತ್ತು ಕಾನೂನಿಗಾಗಿ ಚಳುವಳಿಯನ್ನು ಬಲಪಡಿಸಲು

ಬೀಡಿ ಮಜೂರ ಸಂಘಗಳ ಪ್ರತಿನಿಧಿ ಸಭೆಯ ನಿರ್ಧಾರ

ಎಸ್.ಕೆ.ಟಿ.ಯು ಸಿ.ಯ ಬೀಡಿ ಕೈಗಾರಿಕಾ ಗ್ರೂಪಿನ ಸಭೆಯು ತಾ. 11-9-58 ರಂದು ಮಂಗಳೂರಲ್ಲಿ ಜರಗಿತು. ಸಭೆಯಲ್ಲಿ ಜಿಲ್ಲೆಯ ಎಲ್ಲಾ ಬೀಡಿ ಮಜೂರರ ಸಂಘಗಳ ಗ್ರತಿನಿಧಿಗಳೂ ಹಾಜರಿದ್ದರು. ಎಸ್.ಕೆ.ಟಿ.ಯು.ಸಿ. ಕಾರ್ಯದರ್ಶಿ ಶ್ರೀ ಕೆ. ಮೋನಪ್ಪಶೆಟ್ಟರು ಸಭೆ ಕರೆದ ಉದ್ದೇಶವನ್ನು ವಿವರಿಸಿದ ಬಳಿಕ ಮನವಿಗೆ ಸಹಿ ಸಂಗ್ರಹಿಸಿದ ಕೆಲಸದ ವರದಿ ಮತ್ತದರಲ್ಲಿ ಸಿಕ್ಕಿರುವ ಅನುಭವವನ್ನು ಪ್ರತಿನಿಧಿಗಳು ಪರಸ್ಪರ ವಿನಿಮಯ ಮಾಡಿಕೊಂಡನಂತರ ಎಸ್.ಕೆ.ಟಿ.ಯು.ಸಿ.ಯ ತಾ 31-8-58 ರ ಸಭೆಯಲ್ಲಿ ಬೀಡಿ ಮಜೂರರಿಗೆ ಸಮ್ಬಂಧಿಸಿ ಆಗಿರುವ ತೀರ್ಮಾನಗಳನ್ನು ಜ್ಯಾರಿಗೊಳಿಸುವ ಕುರಿತು ಚರ್ಚಿಸಲಾಯಿತು.

ಸೆಪ್ಟಂಬರ್ ತಿಂಗಳಾಂತ್ಯದೊಳಗೆ ಪ್ರತಿಯೊಂದು ವಾರ್ಡು–ಗ್ರಾಮಗಳಲ್ಲಿ ಬೀಡಿ ಮಜೂರರ ಸಭೆ ಜರಗಿಸಿ ಬೀಡಿ ಮಜೂರ ಪ್ರತಿನಿಧಿಗಳ ಶಿಷ್ಟಮಂಡಲಕ್ಕೆ ಮಜೂರ ಮಂತ್ರಿಗಳು ಕೊಟ್ಟ ಉತ್ತರವನ್ನು ವಿವರಿಸಬೇಕೆಂದೂ ವಾರ್ಡು–ಗ್ರಾಮ ಕಮಿಟಗಳನ್ನು ರಚಿಸಬೇಕೆಂದೂ, ಬೀಡಿ ಮಜೂರರ ಸಂಘಕ್ಕೆ ಸದಸ್ಯರನ್ನು ಸೇರಿಸಬೇಕೆಂದೂ, ಕೂಡಲೇ ಕನಿಷ್ಟಕೂಲಿ ನಿರ್ಣಯಿಸಬೇಕು, ಮತ್ತು ಕಾನೂನು ರಚಿಸಬೇಕು ಎಂದು ಸರಕಾರವನ್ನು ಒತ್ತಾಯಿಸುವ ಠರಾವುಗಳನ್ನು ಪಾಸುಮಾಡಿ ಸರಕಾರಕ್ಕೆ ಕಳುಹಿಸಕೊಡಬೇಕೆಂದೂ ತೀರ್ಮಾನಿಸಲಾಗಿದೆ. ಹಾಗೆಯೇ ಜಿಲ್ಲೆಯ ಪ್ರತಿಯೊಂದು ಬೀಡಿ ಮಜೂರ ಸಂಘಗಳ ಕಮಿಟಿ ಸಭೆ ಮತ್ತು ಮಹಾಸಭೆಗಳಲ್ಲೂ ಇಂಥದೇ ಠರಾವುಗಳನ್ನು ಪಾಸುಮಾಡಿ

ಹಾವೇರಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿ ಸಭೆ

(೭ನೇ ಪುಟದಿಂದ)

ರ ಮಾಡಿದಂತೆ ಎಚ್. ಜಿ. ಬೆಂಗೇರಿ ಮಾಸ್ತರರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಮೊದಲಿಗೆ ವಿ. ಪಂಚಾಕ್ಷರಿಯವರು ಕಾಮ್ರೇಡ್ ಕಕ್ಕಿಲ್ಲಾಯರ ಪರಿಚಯ ಮಾಡಿಕೊಟ್ಟ ನಂತರ ಕಕ್ಕಿಲ್ಲಾಯರು ಕಮ್ಯೂನಿಸ್ಟ್ ಪಾರ್ಟಿ ಬಗ್ಗೆ ಕಾಂಗ್ರೆಸ್ಸು ತಳೆದ ಅಪಪ್ರಚಾರವನ್ನು ಮತ್ತು ಕೇರಳದಲ್ಲಿ ನಡೆದ ಪ್ರಜಾಪ್ರಭುತ್ವದ ಮುನ್ನಡೆಯನ್ನು ಸವಿಸ್ತಾರವಾಗಿ ಹೇಳಿದರು. ಮತ್ತೂ ಮುಂದುವರೆದು ಕರ್ನಾಟಕದಲ್ಲಿ ನಡೆದಿರುವ ಕಾಂಗ್ರೆಸ್ಸಿನ ಭಂಡವಳಶಾಹಿ ದಬ್ಬಾಳಿಕೆ, ಅಧಿಕಾರದ ಕಚ್ಚಾಟ, ಬಡ ರೈತ ಕೂಲಿಗಾರರ ಗೋಳಾಟ, ಪೊಳ್ಳು ಘೋಷಣೆಗಳ ಒದರಾಟ ಮತ್ತು ಮುರಾರ್ಜಿಯವರ ಭಿಕ್ಷಾಟನೆ, ಮುಖ್ಯ ಮಂತ್ರಿ ನೆಹರೂರ ಪೀಕಲಾಟ ಮೊದಲಾಗಿ ಸಮಂಜಸವಾಗಿ ಸಮರ್ಥ ರೀತಿಯಲ್ಲಿ ಹೇಳಿದರು. ಸಭೆಗೆ ಕೂಡಿದ ಸಾವಿರಾರು ಜನರು ರಾತ್ರಿ ೧೨ ಘಂಟೆಯಾದರೂ ಕದಲದೇ ಒಳ್ಳೇ ಉತ್ಸುಕತೆಯಿಂದ ಕೇಳಿದರು. ರಾಷ್ಟ್ರ ಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸರಕಾರಕ್ಕೆ ಕಳುಹಿಸಕೊಡಬೇಕೆಂದೂ ಕೇಳಿಕೊಂಡಿದೆ.

ಎರಡನೆ ಹೆಜ್ಜೆಯಾಗಿ ಅಕ್ಟೋಬರ ತಿಂಗಳ ಒಂದನೇ ತಾರೀಕಿನಿಂದ ಎರಡು ವಾರಗಳ ತನಕ ಜಿಲ್ಲೆಯ ಪ್ರತಿಯೊಬ್ಬ ಬೀಡಿ ಮಜೂರರೂ ಮೈಸೂರು ಸರಕಾರದ ಮಜೂರ ಮಂತ್ರಿಗಳಿಗೆ ಪತ್ರ ಬರೆದು ಬೀಡಿ ಮಜೂರರಿಗೆ ಕೂಡಲೇ ಸಾವಿರ ಬೀಡಿಗೆ ರೂ. 2 ಕನಿಷ್ಟಕೂಲಿ ನಿರ್ಣಯಿಸಬೇಕು. ಮತ್ತು ಬೀಡಿ ಮಜೂರರ ಹಿತ ರಕ್ಷಿಸುವ ಕಾನೂನು ರಚಿಸಬೇಕು ಎಂದು ಒತ್ತಾಯಿಸಬೇಕೆಂದೂ ಜಿಲ್ಲೆಯ ಬೀಡಿ ಮಜೂರರನ್ನು ಕೇಳಿಕೊಂಡಿದೆ.

ಮೂರನೇಯದಾಗಿ ಅಕ್ಟೋಬರ ತಿಂಗಳ ಮೂರನೇ ವಾರದಲ್ಲಿ ಸೇರಲು ನಿರ್ಣಯವಾಗಿರುವ ಮೈಸೂರು ಅಸೆಂಬ್ಲಿಯ ಅಧಿವೇಶನ ಮುಗಿಯುವುದರೊಳಗೆ ಅಂದರೆ ನವಂಬರ ತಿಂಗಳ ಎರಡನೇ ವಾರದಲ್ಲಿ ಮಂಗಳೂರಿನಿಂದ ಬೆಂಗಳೂರಿಗೆ ಕನಿಷ್ಟ 75 ಮಂದಿ ಬೀಡಿ ಮಜೂರರ ಕಾಲ್ನಡೆ ಜಾಥಾ ಒಂದನ್ನು ಕೊಂಡೊಯ್ದು ಸೆಕ್ರೆಟರಿಯೇಟಿನ ಮುಂದೆ ಮತ ಪ್ರದರ್ಶನ ನಡೆಸಬೇಕೆಂದೂ ನಿರ್ಧರಿಸಲಾಗಿದೆ. ಹಾಗೆಯೇ ಇನ್ನೂ ಸಂಘಟಿತರಾಗದ ಪ್ರದೇಶಗಳ ಬೀಡಿ ಮಜೂರರೂ ಈ ಜಾಥಾದಲ್ಲಿ ಒಬ್ಬಬ್ಬರನ್ನಾದರೂ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳಲಾಗಿದೆ.

ಬೀಡಿ ಮಜೂರರ ಈ ಚಳುವಳಿಗೆ ಜಿಲ್ಲೆಯ ಹಾಗೂ ಪ್ರಾಂತ್ಯದ ಇತರ ವಿಭಾಗಗಳ ಸಂಘಟಿತ ಮಜೂರರ ಮತ್ತು ರೈತರ ಸಹಕಾರವನ್ನು ಸಭೆಯಲ್ಲಿ ಕೋರಲಾಗಿದೆ.

ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ

ಪುತ್ತೂರು ಬೀಡಿ ಲೇಬರ್ ಯೂನಿಯನಿನ ವಾರ್ಷಿಕ ಮಹಾಸಭೆಯು ತಾ. 12—9—58ರಂದು ಶ್ರೀ ಕೆ. ಸಂಜೀವ ರೈಗಳ ಅಧ್ಯಕ್ಷತೆಯಲ್ಲಿ ಜರಗಿ ಗತವರ್ಷದ ವರದಿ ಲೆಕ್ಕಪತ್ರಗಳನ್ನು ಪಾಸು ಮಾಡಿತು. ಹೊಸ ವರ್ಷಕ್ಕೆ ಶ್ರೀಯುತರುಗಳಾದ ಕೆ. ಸಂಜೀವ ರೈಗಳು ಅಧ್ಯಕ್ಷರಾಗಿಯೂ, ಶ್ರೀನಿವಾಸ ಹೆಗ್ಡೆ ಉಪಾಧ್ಯಕ್ಷರುಗಳಾಗಿಯೂ, ಕೃಷ್ಣಪ್ಪ ನಾಯ್ಕ ಕಾರ್ಯದರ್ಶಿಯಾಗಿಯೂ, ಗೋಪಾಲಕೃಷ್ಣ ಜತೆ ಕಾರ್ಯದರ್ಶಿಯಾಗಿಯೂ, ಹುಸೇನ್‌ರವರು ಕೋಶಾಧಿಕಾರಿಗಳಾಗಿಯೂ ಇರುವ ಕಮಿಟಿಯೊಂದನ್ನು ಸಭೆಯಲ್ಲಿ ಚುನಾಯಿಸಲಾಯಿತು. ಅಲ್ಲದೆ ಗತವರ್ಷದ ಲೆಕ್ಕಪತ್ರದ ಪರಿಶೋಧಕರಾಗಿ ಸಾಮಾನ್ಯ ಸದಸ್ಯರಿಬ್ಬರನ್ನು ಸಭೆಯಲ್ಲಿ ಆರಿಸಲಾಗಿದೆ

ನಂತರ ಮಾತಾಡಿದ ಶ್ರೀ ಕೆ. ಮೋನಪ್ಪ ಶೆಟ್ಟರು ಕನಿಷ್ಠ ಕೂಲಿಗಾಗಿ ಮತ್ತು ಕಾನೂನು ರಚನೆಗಾಗಿ ಜಿಲ್ಲೆಯಲ್ಲಿ ಇತರ ಕಡೆಗಳ ಬೀಡಿ ಮಜೂರರು ನಡೆಸುತ್ತಿರುವ ಚಳುವಳಿಯ ಸೂಕ್ಷ್ಮ ವರದಿಯೊಂದನ್ನು ಕೊಟ್ಟು ಪುತ್ತೂರಿನ ಬೀಡಿ ಮಜೂರರೂ ಈ ಚಳುವಳಿಯಲ್ಲಿ ಸೇರಿ ಅದನ್ನು ಬಲಪಡಿಸಬೇಕೆಂದೂ ಕೇಳಿಕೊಂಡರು. ಸಾವಿರ ಬೀಡಿಗಳಿಗೆ ರೂ. 2 ಕನಿಷ್ಠ ಕೂಲಿ ನಿರ್ಣಯಿಸಬೇಕು ಮತ್ತು ಬೀಡಿ ಮಜೂರರ ಹಿತ ರಕ್ಷಿಸುವ ಕಾನೂನು ರಚಿಸಬೇಕು ಎಂದು ಸರಕಾರವನ್ನು ಒತ್ತಾಯಪೂರ್ವಕ ಕೇಳಿಕೊಳ್ಳುವ ಠರಾವನ್ನು ಸಭೆಯು ಮಂಜೂರು ಮಾಡಿದೆ.

ಅಧ್ಯಕ್ಷರ ಭಾಷಣ ಧನ್ಯವಾದಗಳೊಂದಿಗೆ ಸಭೆ ಕೊನೆಗೊಂಡಿತು.

ಪುತ್ತೂರು—

ಸರಕಾರಿ ಸ್ಕೇಲಿನಂತೆ ವೇತನ ಸಿಗಬೇಕು

ಪುತ್ತೂರು ಪಂಚಾಯತ್ ಬೋರ್ಡ್ ಮಜೂರರ ಬೇಡಿಕೆ

ಪುತ್ತೂರು ಪಂಚಾಯತ್ ಬೋರ್ಡಿನ ಸೆನಿಟರಿ ಮಜೂರರ ಸಭೆಯೊಂದು ತಾ. 12—9—58ರಂದು ಸಂಜೆ ಪುತ್ತೂರಿನಲ್ಲಿ ಜರಗಿದಾಗ ಸರಕಾರಿ ಸ್ಕೇಲಿನಂತೆ ಸಂಬಳ ಕೊಡಬೇಕೆಂದು ಪುತ್ತೂರು ಪಂಚಾಯತ್ ಬೋರ್ಡನ್ನು ಕೇಳಿಕೊಳ್ಳಲು ನಿರ್ಧರಿಸಲಾಯಿತು. ಅಲ್ಲದೆ ವಾರಕ್ಕೊಂದು ದಿನ ರಜೆ ಸಿಗಬೇಕು, ವರ್ಷಕ್ಕೊಂದು ಜೋಡು ಮೆಟ್ಟು ಕೊಡಬೇಕು. ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು ಸಾರಿ ಮಾತ್ರ ಮಸ್ಟರ್ ಕರೆಯಬೇಕು. ಪ್ರತೀ ವರ್ಷ ಬೋನಸ್ ಫಂಡಿನ ಲೆಕ್ಕ ಕೊಡಬೇಕು. ಕೆಲಸಕ್ಕೆ ಅಗತ್ಯವಿರುವ ಉಪಕರಣಗಳನ್ನು ಪಂಚಾಯತ್ ಬೋರ್ಡಿನವರೇ ಒದಗಿಸಿಕೊಡಬೇಕು. ಆಂಟಿ ಮಸ್ಕಿಟೊ ಮಜೂರರಿಗೂ ಸಿಕ್ ರಜೆ ಕೊಡಬೇಕು ಎಂಬ ಕೇಳಿಕೆಗಳನ್ನು ಪುತ್ತೂರು ಪಂಚಾಯತ್ ಬೋರ್ಡಿಗೂ, ಸರಕಾರಕ್ಕೂ ಕಳುಹಿಸಿಕೊಡಲು ತೀರ್ಮಾನ ಮಾಡಲಾಗಿದೆ.

ಸಭೆಯಲ್ಲಿ ಹಾಜರಿದ್ದ ಪುತ್ತೂರು ತಾಲೂಕು ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಸಂಜೀವ ರೈಗಳೂ ದ. ಕ. ಜಿಲ್ಲಾ ಮುನ್ಸಿಪಲ್ ಮತ್ತು ಲೋಕಲ್ ಬೋರ್ಡ್ ವರ್ಕರ್ಸ್ ಯೂನಿಯನಿನ ಅವಶ್ಯಕತೆಯನ್ನು ವಿವರಿಸಿದರು. ಮತ್ತು ಪ್ರತಿಯೊಬ್ಬ ಮಜೂರನೂ ಸಂಘ ಸದಸ್ಯನಾಗಿ ಸೇರಿ ಒಗ್ಗಟ್ಟಾಗಬೇಕೆಂದೂ ಕೇಳಿಕೊಂಡರು.

ಸ್ವಲ್ಪದರಲ್ಲಿ ಸುದ್ದಿ

ಅಣು ಅಸ್ತ್ರಗಳ ಪ್ರಯೋಗ ನಿಲ್ಲಿಸಬೇಕೆಂದು ಅಮೇರಿಕದ ವಿಜ್ಞಾನಿಗಳು ಅಧ್ಯಕ್ಷ ಐಸನ್‌ಹೋವರರಲ್ಲಿ ಮನವಿ ಮಾಡಿಕೊಂಡಿದ್ದಾರೆ. 2,200 ವಿಜ್ಞಾನಿಗಳು ಮತ್ತು ಎಂಜಿನಿಯರುಗಳನ್ನು ಪ್ರತಿನಿಧಿಸುವ ಅಮೇರಿಕನ್ ವಿಜ್ಞಾನಿಗಳ ಸಂಘವು ಅಕ್ಟೋಬರ್ 31ರಿಂದ ನವಾಡ ಪ್ರದೇಶದಲ್ಲಿ ನಡೆಸಬೇಕೆಂದಿರುವ ಅಣು ಅಸ್ತ್ರಗಳ ಪ್ರಯೋಗ ನಿಲ್ಲಿಸಬೇಕೆಂದು ಮನವಿ ಮಾಡಿಕೊಂಡಿದೆ.

ಂ ಂ ಂ

ಪಶ್ಚಿಮ ಬಂಗಾಳದ ಕಲ್ಕತ್ತಾ ನಗರದಲ್ಲಿ ಆಗಸ್ಟ್ 12ರಿಂದ ಮುಷ್ಕರ ನಡೆಸುತ್ತಿರುವ 10,000 ಮಂದಿ ಟ್ರಾಂವೇ ಕೆಲಸಗಾರರ ಮುಷ್ಕರ ಇನ್ನೂ ಮುಂದುವರಿಯುತ್ತಿದೆ.

ಂ ಂ ಂ

ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿಯ ಸಭೆಯು ಅಕ್ಟೋಬರ್ 8ರಿಂದ ಮದರಾಸ್‌ನಲ್ಲಿ ಜರುಗಲಿದೆ. ಅಕ್ಟೋಬರ್ 5ರಿಂದ ಕೇಂದ್ರ ಕಾರ್ಯಕಾರೀ ಸಮಿತಿಯ ಸಭೆಯು ಜರುಗುವುದು.

ಂ ಂ ಂ

ಮುಂಬಯಿ ರಾಜ್ಯದ ಕ್ಯಾಂಬೇ ಪ್ರದೇಶದಲ್ಲಿ ತೈಲ ಶೋಧನೆಯಾಗಿದೆಯೆಂದು ಕೇಂದ್ರ ಸಚಿವ ಕೆ. ಡಿ. ಮಾಳವೀಯರವರು ತಿಳಿಸಿದ್ದಾರೆ. ರಷ್ಯ ಮತ್ತು ರುಮೇನಿಯದ ತಜ್ಞರುಗಳು ತೈಲ ಶೋಧನಾ ಆಯೋಗದೊಂದಿಗೆ ಕೆಲಸ ಮಾಡುತ್ತಿದ್ದರು.

ಂ ಂ ಂ

ಮೈಸೂರು ಸರಕಾರವು ದ್ವಿತೀಯ ಕೈಗಾರಿಕಾ ವಿವಾದ ಪಂಚಾಯ್ತಿಯನ್ನು ನಿಯಮಿಸಿದೆ. ಈ ಕೈಗಾರಿಕಾ ಪಂಚಾಯ್ತಿಗೆ ಮಾಜಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ವೇಣುಗೋಪಾಲ ಮೊದಲಿಯಾರ್‌ರವರನ್ನು ನಿಯಮಿಸಲಾಗಿದೆ.

ಂ ಂ ಂ

ಉತ್ತರ ಪ್ರದೇಶದ ಆಹಾರ ಪರಿಸ್ಥಿತಿ ಮತ್ತು ಸರಕಾರದ ಅನಾದರಣೆಯ ನೀತಿಯ ವಿರುದ್ಧವಾಗಿ ಲೋಕ ಸಭೆಯ ಸದಸ್ಯರಾದ ಪ್ರೊ॥ ಶಿಬ್ಬನ್‌ಲಾಲ್ ಸಕ್ಸೇನರವರು ಕಳೆದ ೨೦ ದಿನಗಳಿಂದಲೂ ನಡೆಸುತ್ತಿದ್ದ ನಿರಶನ ವ್ರತವನ್ನು ನಿಲ್ಲಿಸಿದ್ದಾರೆ.

ಂ ಂ ಂ

ಕೇರಳದಲ್ಲಿ ಕನ್ನಡ—ತಮಿಳು ಶಾಲೆಗಳಿಗೆ ಪಾಠಪಟ್ಟಿ ಮತ್ತು ಪುಸ್ತಕಗಳು

ಕಾಸರಗೋಡು ತಾಲೂಕಿನ ಕನ್ನಡ ಶಾಲೆಗಳಲ್ಲಿ ಈ ವರ್ಷ ಮೈಸೂರು ರಾಜ್ಯದ ಪಾಠಪಟ್ಟಿ ಮತ್ತು ಪುಸ್ತಕಗಳನ್ನೂ ಚಿತ್ತೂರು ತಾಲೂಕಿನ ತಮಿಳು ಶಾಲೆಗಳಲ್ಲಿ ಮದ್ರಾಸ್ ರಾಜ್ಯದ ಪಾಠಪಟ್ಟಿ ಮತ್ತು ಪುಸ್ತಕಗಳನ್ನೂ ಉಪಯೋಗಿಸಬೇಕೆಂದು ಸರಕಾರ ಆಜ್ಞೆ ಹೊರಡಿಸಿದೆ. ಕನ್ನಡ ಪುಸ್ತಕಗಳನ್ನು ಮಂಗಳೂರಿನಿಂದಲೂ ತಮಿಳು ಪುಸ್ತಕಗಳನ್ನು ಮದ್ರಾಸಿನಿಂದಲೂ ತರಿಸಿ ವಿತರಣೆ ಮಾಡಲು ಸರಕಾರ ಏರ್ಪಾಡು ಮಾಡಿದೆ.

ವಾರದ ವಾರ್ತಾ ಸಮೀಕ್ಷೆ

(೨ನೇ ಪುಟದಿಂದ)

ಪೂರ್ವ ಏಷ್ಯದಲ್ಲಿ ಅಮೇರಿಕದ ಕುತಂತ್ರ

ತನ್ನ ಬಾಲಬಡುಕ ಚಿಯಾಂಗನನ್ನು ರಕ್ಷಿಸಲು ಪೂರ್ವ ಏಷ್ಯದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹೀ ತನ್ನ ಕುತಂತ್ರವನ್ನು ಮತ್ತೆ ಆರಂಭಿಸಿದೆ. ಅಮೇರಿಕದ ಏಳನೆಯ ನೌಕಾದಳವು ಫಾರ್ಮೋಸಾದ ತೀರ ಪ್ರದೇಶದಲ್ಲಿ ಬೆಂಗಾವಲಾಗಿಲ್ಲದಿದ್ದಲ್ಲಿ ಎಂದೋ ಚಿಯಾಂಗ್ ಫಾರ್ಮೋಸದಿಂದ ಕಾಲ್ತೆಗೆದು ತೌರೂರು 'ಅಮೇರಿಕ'ಕ್ಕೆ ತೆರಳುತ್ತಿದ್ದುದುಂಟು. ಆದರೆ ಅಮೇರಿಕ ಈ ನಿರ್ಜೀವ ಚಿಯಾಂಗನಿಗೆ ಆಮ್ಲಜನಕ ತುಂಬಿ ಜೀವಂತವಾಗಿರಿಸಿದೆ.

ಜನತಾ ಚೀಣದ ಗಡಿಪ್ರದೇಶದಲ್ಲಿರುವ ಕ್ವಿಮಾಯ್ ಮತ್ತು ಮಟ್ಸು ದ್ವೀಪಗಳನ್ನು ಜನತಾ ಚೀಣವು ಪಡೆದುಕೊಳ್ಳುವುದನ್ನು ತಡೆಯುತ್ತಿದೆ. ಕಳೆದೆರಡು ವಾರಗಳಿಂದ ಈ ದ್ವೀಪಗಳ ಬಿಡುಗಡೆಗಾಗಿ ಗುಂಡಿನ ಮಳೆ ಸುರಿಯುತ್ತಿದೆ. ಕ್ವಿಮಾಯ್ ಮಟ್ಸು ದ್ವೀಪಗಳು ಮತ್ತು ಫಾರ್ಮೋಸಗಳು ಜನತಾ ಚೀಣದ ಅನಂಗ ಭಾಗವೆಂದು ಇಡೀ ಜಗತ್ತಿನಲ್ಲಿಯೇ ನಿರ್ವಿವಾದವಾದ ಅಂಶವಾಗಿದೆ. ಆದರೆ ಅಮೇರಿಕ 600 ಮಿಲಿಯ ಚೀಣೀಯ ಅಸ್ತಿತ್ವವನ್ನು ನಿರ್ಲಕ್ಷಿಸಿ ತನ್ನ ಬಾಲಬಡುಕ ಚಿಯಾಂಗನ ಫಾರ್ಮೋಸವನ್ನೇ ಚೀಣವೆಂದು ಸಾರುತ್ತಿದೆ.

ಚೀಣದ ಜನತೆ ಮತ್ತು ನಾಯಕರು ಏನೇ ಆಗಲಿ ತೀರಪ್ರದೇಶದಲ್ಲಿರುವ ದ್ವೀಪಗಳನ್ನು ಫಾರ್ಮೋಸವನ್ನು ಬಿಡುಗಡೆ ಮಾಡಲು ಪಣ ತೊಟ್ಟಿದ್ದಾರೆ. ಇದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಅಮೇರಿಕ ಮೊದಲೇ ಎಚ್ಚತ್ತು ಕೈಸುಡುವ ಮೊದಲು ಕಾಲ್ತೆಗೆಯುವುದು ವಾಸಿ.

ಇಂದು ಕ್ವಿಮಾಯ್ ಮತ್ತು ಮಟ್ಸು ದ್ವೀಪಗಳ ಬಳಿ ಕದನ ನಡೆಯುತ್ತಿರುವುದರಿಂದಾಗಿ ಪೂರ್ವ ಏಷ್ಯಾದಲ್ಲಿನ ಶಾಂತಿಗೆ ಧಕ್ಕೆ ಬರುವಂತಾಗಿದೆ. ಈ ಪ್ರಶ್ನೆಯು ತೀರಪ್ರದೇಶಗಳು ಜನತಾ ಚೀಣಕ್ಕೆ ಸೇರುವವರೆಗೆ ತೀರದಾಗಿದೆ. ಅಮೇರಿಕನ್ ನೌಕಾ ಪಡೆಗಳು ಕೂಡಲೇ ಅಲ್ಲಿಂದ ಕಾಲ್ತೆಗೆದಲ್ಲಿ ಇದು ಸುಲಭ ಸಾಧ್ಯವಾದ ಕಾರ್ಯವಾಗುವುದು. ಆದರೆ ಅಮೇರಿಕ ಚಿಯಾಂಗನ ರಕ್ಷಣೆಗೆ ಸಿದ್ಧವಾಗಿ ನಿಂತಿದೆ. ಜನತಾ ಚೀಣದ ಮೇಲೆ ಧಾಳಿ ನಡೆದಲ್ಲಿ ಅದು ತನ್ನ ಮೇಲೆ ಆದ ಧಾಳಿಯೆಂದು ಪರಿಗಣಿಸಿ ಸೋವಿಯತ್ ಯೂನಿಯನ್ ಪ್ರವೇಶಿಸುವುದಾಗಿ ಸ್ಪಷ್ಟವಾಗಿ ಘೋಷಿಸಿದೆ. ಆದ್ದರಿಂದ ಪರಿಸ್ಥಿತಿಯ.ನ್ನರಿತು ಅಮೇರಿಕ ತನ್ನ ನೀತಿಯನ್ನು ಬದಲಿಸಲಿ.

ಜನತಾ ಚೀಣವು ಈ ವಿವಾದದ ಬಗ್ಗೆ ಸಂಧಾನಕ್ಕೆ ಸಹ ಸಿದ್ಧವಿದೆ. ಅಮೇರಿಕದೊಂದಿಗೆ ಸಂಧಾನ ನಡೆಸಲು ಈಗಾಗಲೆ ವಾರ್ಸಾದಲ್ಲಿ ರಾಯಭಾರಿ ಮಟ್ಟದಲ್ಲಿ ಮಾತುಕತೆ ಆರಂಭವಾಗಿದೆ. ಇದು ಫಲಕಾರಿಯಾಗಲಿ ಎಂಬುದೇ ನಮ್ಮ ಆಶಯ.

ನೂತನ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಪತ್ರಿಕೆಯ ಪ್ರಕಟನೆ

ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ನೂತನ ಸೈದ್ಧಾಂತಿಕ, ಸಮಾಚಾರ ಪತ್ರಿಕೆಯಾದ "ಶಾಂತಿ-ಸಮಾಜವಾದ ಸಮಸ್ಯೆ"ಗಳು ತನ್ನ ಪ್ರಥಮ ಸಂಚಿಕೆಯನ್ನು ಹೊರಡಿಸಿದೆ. ಪತ್ರಿಕೆಯ ಮುಖ್ಯ ಉದ್ದೇಶವನ್ನು ಅಗ್ರಲೇಖನದಲ್ಲಿ ವಿವರಿಸಲಾಗಿದೆ.

ಎ. ನೊವೋತ್ನಿಯವರ "ಶಾಂತಿ-ಸಮಾಜವಾದಗಳ ವಿಜಯದ ಸಲುವಾಗಿ"; ಲಿಪು-ಚುನ್‌ರವರ "ಚೀಣದಲ್ಲಿ ಸಮಾಜವಾದೀ ನಿರ್ಮಾಣ ಕಾರ್ಯದ ಪ್ರಸ್ತುತ ಘಟ್ಟದ ಮೂಲಭೂತ ಸಮಸ್ಯೆಗಳು"; ಜಿ. ಗ್ಲೆಜೆರ್‌ಮನ್ ಮತ್ತು ಬಿ. ಉಕ್ರೇನ್‌ಸ್ಸೇವ್‌ರವರ "ಸಮಾಜವಾದ ಮತ್ತು ರಾಜ್ಯ" ಜಾಕೆಸ್ ದುಕ್ಲೋಸ್‌ರವರ "ಫ್ರಾನ್ಸಿನಲ್ಲಿ ಫಾಸಿಸ್ಟ್ ಭೀತಿ ಮತ್ತು ಗಣತಂತ್ರೀಯ ಐಕ್ಯಮತ್ಯ"; ಎಲ್. ತಿಸ್ಸನ್ಯಾನೂಸ್‌ರವರ "ಅಮೇರಿಕನ್ ವಸಾಹತುವಾದ ಮತ್ತು ಅರಬ್ ಪ್ರಾಚ್ಯ" ಮತ್ತು ಓ. ದ್ಲೂಸ್ಕಿಯವರ "ಜರ್ಮನ್ ಸೈನಿಕವಾದ-ಶಾಂತಿಗೆ ಗಂಡಾಂತರ"—ಮುಂತಾದ ಅನೇಕ ಪ್ರಚಲಿತ ಸಮಸ್ಯಾ ಸಂಬಂಧಿತ ಲೇಖನಗಳು ಈ ಸಂಚಿಕೆಯಲ್ಲಿವೆ.

"ಆರ್ಥಿಕ ಬಿಕ್ಕಟ್ಟು ಮತ್ತು ಕಾರ್ಮಿಕ ವರ್ಗ"ವೆಂಬ ಸಮಸ್ಯೆಯ ಕುರಿತು ಪತ್ರಿಕೆಯ ಸಂಪಾದಕ ಮಂಡಲವು ನಡೆಸುತ್ತಿರುವ ಅಭಿಪ್ರಾಯ ವಿನಿಮಯ ವಿಭಾಗಕ್ಕಾಗಿ ಅನೇಕ ಪುಟಗಳನ್ನು ಮೀಸಲಿಡಲಾಗಿದೆ. ಯೂರೋಪ್, ಏಷಿಯಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಮುಂತಾದ ೨೦ಕ್ಕಿಂತಲೂ ಹೆಚ್ಚು ದೇಶಗಳಲ್ಲಿ ಶ್ರಮಜೀವೀ ಚಳುವಳಿಯ ನಾಯಕರಾಗಿರುವ ಜನರು ಈ ಅಭಿಪ್ರಾಯ ವಿನಿಯದಲ್ಲಿ ಭಾಗವಹಿಸುತ್ತಿದ್ದಾರೆ.

"ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು" ಎಂಬ ಉಪ ಶೀರ್ಷಿಕೆಯಡಿಯಲ್ಲಿ ಅನೇಕ ಸೋದರ 'ಪಾರ್ಟಿ'ಗಳ ಚಟುವಟಿಕೆಯ ಕುರಿತ ಸಮಾಚಾರವನ್ನು ನೀಡಲಾಗಿದೆ. ವಿಮರ್ಶ ಮತ್ತು ಪುಸ್ತಕ ಸೂಚೀ ಲೇಖನಗಳನ್ನೂ, ಟಿಪ್ಪಣಿಗಳನ್ನೂ, 'ಇಂದಿನ ಮಾರ್ಕ್ಸ್‌ವಾದ' ಪತ್ರಿಕೆಯ ವಿಮರ್ಶೆಯನ್ನೂ, ಸಂಪಾದಕ ಮಂಡಲದ ಪತ್ರವೊಂದನ್ನೂ ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

"ಶಾಂತಿ-ಸಮಾಜವಾದ ಸಮಸ್ಯೆಗಳು" ಎಂಬೀ ಮಾಸಪತ್ರಿಕೆಯನ್ನು ರಶಿಯನ್, ಚೀಣೀ, ಜೆಕ್, ಜರ್ಮನ್, ಪೋಲಿಷ್, ರೂಮಾನಿಯನ್, ಬಲ್ಗೇರಿಯನ್, ಹಂಗೇರಿಯನ್, ಕೊರಿಯನ್, ವಿಯೆತ್‌ನಾಮಿ, ಅಲ್ಬೇನಿಯನ್, ಇಂಗ್ಲಿಷ್, ಸ್ಪಾನಿಷ್, ಇಟಾಲಿಯನ್ ಮತ್ತು ಸ್ವೀಡಿಷ್ ಭಾಷೆಗಳಲ್ಲಿ ಪ್ರಕಟಿಸಲಾಗುತ್ತದೆ.

ರಷ್ಯಾದಲ್ಲಿ ಇನ್ನೊಂದು ಪರಮಾಣು ವಿದ್ಯುತ್ಕೇಂದ್ರ

ಸೋವಿಯತ್ ಒಕ್ಕೂಟದಲ್ಲಿ ಕಾರ್ಯಸಮರ್ಥತೆಯುಳ್ಳ (೧,೦೦,೦೦೦ ಕಿಲೋವಾಟ್) ಪರಮಾಣು ವಿದ್ಯುತ್ಕೇಂದ್ರದ ಒಂದು ಭಾಗವು ಸಿದ್ಧವಾಗಿದೆ. ಪೂರ್ತಿಯಾದಾಗ ಈ ಕೇಂದ್ರವು ಆರು ಲಕ್ಷ ಕಿಲೋವಾಟ್ ಉತ್ಪಾದಿಸಲು ಸಮರ್ಥವಾಗುವುದು. ೫,೦೦೦ ಕಿಲೋವಾಟ್‌ಗಳ ವಿಶ್ವ ಪ್ರಥಮ ಪರಮಾಣು ವಿದ್ಯುತ್ಕೇಂದ್ರವು ಸೋವಿಯತ್ ನಾಡಿನಲ್ಲಿ ೧೯೫೪ರಲ್ಲಿ ಸ್ಥಾಪಿಸಲ್ಪಟ್ಟಿತು.

ದೇವಯೋಧಗಿಯಾಂಗ್

(೮ನೇ ಪುಟದಿಂದ)

ಯೊಂದಿಗೆ ಅಂತರಿಕ್ಷಕ್ಕೆ ಹಾರಿ ಕ್ಷಣದಲ್ಲಿ ಮೋಡಗಳ ಮಧ್ಯೆ ಮಾಯವಾದನು.

ಅವರೆಗೆ ಕಾರ್ಮೋಡಗಳಿಂದ ಕತ್ತಲು ಕವಿದ ಮುಗಿಲು ಆಗ ಕೆಂಪಗೆ ಕೆಂಡದಂತೆ ಬೆಳಗಿತು. ಬರಬರುತ್ತ ಬಾನು ಬೆಳ್ಳಗಾಗುತ್ತ ನೀಲ ವರ್ಣದ ಆಕಾಶ ಕಾಣಿಸಿತು. ಆ ಸಮಯದಲ್ಲಿ ಮಂದಮಾರುತನು ಅಹ್ಲಾದಕರವಾಗಿ ಬೀಸತೊಡಗಿದನು. ಸುಳಿಗಾಳಿಯ ಸುಳಿವಿನಲ್ಲಿ ಹಸಿರೆಲೆ ಹುಲ್ಲುಗಳು ಸುಳಿಗೊಂಡು 'ಸುಂಪೀ' ಎಂದು ಧ್ವನಿಗೈಯ್ಯುತ್ತಲಿದ್ದವು. ಶಾಂತಿಗಾಗಿ ಪ್ರಾರ್ಥಿಸುತ್ತಿವೆಯೇನೋ ಎಂಬಂತೆ ಭಾಸವಾಗುತ್ತಿತ್ತು.

ಇಂದಿಗೂ ಹೂ ಪಿನ್ಹ ಜಿಲ್ಲೆಯಲ್ಲಿ ಪೌರಾಣಿಕ ಯುದ್ಧದ ಅವಶೇಷಗಳಿವೆ. ಗಿಯಾಂಗ ವೀರನು ಯುದ್ಧದಲ್ಲಿ ಶಸ್ತ್ರಗಳಂತೆ ಉಪಯೋಗಿಸಿದ ಬಂಡುಗಳು ಬೆಳ್ಳಗೆ ಬೆಳಗುತ್ತಿವೆ. ಜನರು ಇವುಗಳಿಗೆ ಆನೆಯ ದಂತದ ಬಿದಿರುಗಳೆಂದು ಹೇಳುತ್ತಾರೆ. ಇವುಗಳು ನೀಟಾಗಿಯೂ ಸಬೂಳವಾಗಿಯೂ ಇವೆ. ಕುದುರೆಯು ಕಾಲದ ಅಗ್ನಿಯಲ್ಲಿ ಅವುಗಳನ್ನು ಕಾಸಿ ಬಡಿದು ಹದನವಾಗಿ ಮಾಡಿದ್ದಾಗಿದೆ. ಸುಟ್ಟ ಬೈಲಾದ ಆರಣ್ಯದಲ್ಲಿ ಜನರು ಊರು ಕಟ್ಟಿಕೊಂಡಿದ್ದಾರೆ. ಆದ್ದರಿಂದ ಆ ಹಳ್ಳಿಗೆ 'ಸುಟ್ಟ ಹಳ್ಳಿ' ಎಂದೇ ಹೆಸರಾಗಿದೆ. 'ರಿಮನ್ವ', 'ಡಾ ಪೂಕ' ಮತ್ತು 'ಸಾಕ್ ಸನ್' ಎಂಬ ಕೊಳಗಳು ಅಲ್ಲಲ್ಲಿ ಕಾಣುತ್ತವೆ. ಅವೆಲ್ಲವುಗಳು ಓಡುವ ಕಬ್ಬಿಣ ಕುದುರೆಯ ಕಾಲಿನ ನಾಲಿನಿಂದುಂಟಾದವುಗಳಂತೆ ಗಿಯಾಂಗ್ ದೇವಪುರುಷನಿದ್ದ ಹಳ್ಳಿಗೆ ಗಿಯಾಂಗನಹಳ್ಳಿ ಎಂದೆ ನಾಮಕರಣವಾಗಿದೆ. ಕೆಲವರು 'ಪೂಡಾಂಗ' ಎಂದೂ ಆ ಹಳ್ಳಿಯನ್ನು ಕರೆಯುತ್ತಾರೆ. ಆ ಹಳ್ಳಿಯಲ್ಲಿ ಒಂದು ಗಿಯಾಂಗ್ ದೇವಯೋಧನ ಗುಡಿಯಿದೆ. ಆ ಗುಡಿಯನ್ನು ಗಿಯಾಂಗ್ ದೇವಮಂದಿರವೆಂದೂ, ಪೂಡಾಂಗ ದೇವಮಂದಿರವೆಂದೂ ಜನರು ವಾಡಿಕೆಯಲ್ಲಿ ಕರೆಯುತ್ತಾರೆ. ಈ ದೇವರನ್ನು ಭಕ್ತಿಯಿಂದ ಪೂಜಿಸುತ್ತಾರೆ; ಪೂಜಿಸಿ, ಹಾಡಿ ಹರಿಸಿ ಹರುಷಭರಿತರಾಗಿ ಕುಣಿಯುತ್ತಾರೆ. ಇಂದಿಗೂ ಜನರು ಭಯಭಕ್ತಿಯಿಂದ ಗಿಯಾಂಗ ದೇವಯೋಧನನ್ನು ಆರಾಧಿಸುತ್ತಾರೆ.

ಪುಂಗಾಳು

ಮಂತ್ರಿಗಳು ಅಧಿಕಾರ ತ್ಯಜಿಸುವಾಗ ಸಾಧ್ಯವಿದ್ದಷ್ಟು ಸಾಗಿಸುವುದು ವಾಡಿಕೆ. ಮೈಸೂರಿನಲ್ಲಿ ಸ್ವಾತಂತ್ರ್ಯಾನಂತರ ಕೆಲವು ಮಂತ್ರಿಮಂಡಲಗಳು ಅಲ್ಪ ಕಾಲಾವಧಿ ಅಧಿಕಾರದಲ್ಲಿದ್ದು ಉರುಳಿದ್ದರಿಂದ ಸರಕಾರೀ ಸಾಮಾನು ಸರಂಜಾಮುಗಳನ್ನು ತಮ್ಮದಾಗಿ ಮಾಡಿಕೊಳ್ಳುವುದು ಕಳ್ಳತನವೇನಲ್ಲ. ಹೀಗೆಷ್ಟೋ ಕಣ್ಣಿಗೆ ಕಂಡದ್ದು ಕಾಣಾದ್ದು ಆಗಿವೆ ಆಗುತ್ತಿವೆ ಮುಂದೆ ಆ ಗುತ್ತವೆ. ಆಡಳಿತದಲ್ಲಿರುವವರು ಕಾಂಗ್ರೆಸ್ಸಿಗರಲ್ಲವೆ?

o o o o

ಈಚೆಗೆ ಮೈಸೂರು ಸರಕಾರದ ಅಧಿಕಾರಿಗಳು ಮಂತ್ರಿಗಳ ಗೃಹಗಳಲ್ಲಿರುವ ಸರಕಾರೀ ಆಸ್ತಿಪಾಸ್ತಿಗಳ ತನಿಖೆ ನಡೆಸಿದಾಗ ಹಲವು ವಸ್ತುಗಳು ನಾಪತ್ತೆಯಾಗಿದ್ದುವು. ತನಿಖೆ ಮುಂದೊರೆಸಿದ್ದರಿಂದ ನಿಜಲಿಂಗಪ್ಪನವರ ಮಂತ್ರಿಮಂಡಲದ ಕೆಲವು ಮಂತ್ರಿಗಳು ಅದನ್ನು ಹೊಂದಿದ್ದಾರೆಂದು ತಿಳಿದುಬಂದಿದೆ. ಇದರಲ್ಲಿ ಮಾಜಿ ಆರೋಗ್ಯ ಸಚಿವ ಶ್ರೀ ಪಾಟೀಲರು "ಮರೆತು" ತಮ್ಮದೆಂದು ಸಾಗಿಸಿರುವ "ಊಟದ ಪಾತ್ರೆ"ಗಳನ್ನು ವಾಪಸು ಕೊಡಬೇಕೆಂದು ಆದೇಶವೀಯಲಾಗಿದೆಯಂತೆ. ಇದು ಆಗಸ್ಟ್ 24ರಂದು ಹೊರಬಿದ್ದಿರುವ ಸುದ್ದಿ.

o o o o

ಪಾಪ ಮಂತ್ರಿಗಳ ಅಧಿಕಾರದಲ್ಲಿರುವಾಗ ಮರೆವು, ಬಿಡುವಾಗ ಇನ್ನೂ ಹೆಚ್ಚು "ಮರೆತು" ಸಾಗಿಸಿದ ವಸ್ತುಗಳನ್ನು ಹಿಂದೆ ಪಡೆಯುವುದು ಯೋಗ್ಯವೆ? ಪಾಪ! ಇದರಿಂದ ಮುಂದೆ ಮಂತ್ರಿಗಳು ಮರೆಯದೆ ಸಾಗಿಸುವುದನ್ನು 'ಮರೆತೇ' ಬಿಡುತ್ತಾರೆಯೇ?

o o o o

ಆಂಧ್ರ ಪ್ರದೇಶದಲ್ಲಿ 12ಮಂದಿ ಮಂತ್ರಿಗಳ ಪ್ರವಾಸಭತ್ತೆ ಕಳೆದ ವರ್ಷ 63ಸಾವಿರ ರೂಪಾಯಿ ಆಗಿದೆಯಂತೆ. ಅದರಲ್ಲಿ ನೀರಾವರಿ ಸಚಿವರ ಪ್ರವಾಸಭತ್ತೆಯೇ 8,109ರೂ ಆಗಿದೆಯಂತೆ. ಇದು ಮಾಸ ಮಾಸಕ್ಕೂ 250ರೂ ಪ್ರವಾಸಭತ್ತೆ ಪಡೆಯುತ್ತಿರುವುದನ್ನು ಬಿಟ್ಟು—ಸುದ್ದಿ.

ಅಧಿಕಾರದಲ್ಲಿದ್ದಾಗ ಸಾಕಷ್ಟು ಹಾಗೂ ಹೀಗೂ ಸರಕಾರದ ಬೊಕ್ಕಸದಿಂದ ಸ್ವಂತ ಬೊಕ್ಕಸವನ್ನು ತುಂಬಿಕೊಳ್ಳುವುದು ಕ್ಲೇಶವೇನಲ್ಲವೆ. ಅಧಿಕಾರವೆಂಬುದು ಕ್ಷಣಿಕ. ಯಾವ ಸಂದರ್ಭದಲ್ಲಿ ಉರುಳುತ್ತಾರೋ ಪಾಪ. ಆದ್ದರಿಂದ ಆದಷ್ಟು ಮಾಡಿಕೊಳ್ಳಲಿ.

o o o o

ಇದರಲ್ಲಿ ಯಾರಿಗೆ ಯಾರೇನು ಕಡಿಮೆಯಿಲ್ಲ. ಕಾಂಗ್ರೆಸ್ ಆಡಳಿತೆಯ ರಾಜ್ಯಗಳಲ್ಲಿ ಪ್ರವಾಸಭತ್ತೆ ಪಡೆದುಗೊಳ್ಳುವುದರಲ್ಲಿ ಪೈಪೋಟಿಯೇ ನಡೆಯುತ್ತಿದೆ. ಇದರಿಂದ ಒಬ್ಬೊಬ್ಬ ಮಂತ್ರಿಗಳೂ ಒಬ್ಬೊಬ್ಬರನ್ನು ಮೀರಿಸುತ್ತಿದ್ದಾರೆ. ಮಂತ್ರಿ ಪದವಿ ಎಂದರೆ ಆದಷ್ಟು ಪ್ರವಾಸಭತ್ಯ, ಸಂಬಳ ಗಿಟ್ಟಿಸುವುದೇ ಘನ ಉದ್ದೇಶ ಎಂದು ಕಾಂಗ್ರೆಸ್ ಸಚಿವರುಗಳು ಸಾರುವುದು ಒಳಿತು.

o o o o

ಮಂತ್ರಿಗಳು ತೃಪ್ತರಾಗಿದ್ದು ಕ್ಷೇಮವಾಗಿದ್ದರೆ ತಾನೆ ದೇಶ ಕ್ಷೇಮವಾಗಿರಲು ಸಾಕು. ಆದ್ದರಿಂದಾಗಿ ಸಾರ್ವಜನಿಕರು, ವಿರೋಧ ಪಕ್ಷದ ಸದಸ್ಯರುಗಳು ಇಂಥ

[ಕೊನೇ ಪುಟ ನೋಡಿ]

ಎರಡು ಬಗೆ ನೀತಿ ಅನುಸರಿಸುವವರು ಯಾರು ?

(ಮೊದಲನೇ ಪುಟದಿಂದ)

ಆಡಳಿತೆಯಲ್ಲಿ ಪ್ರವೇಶಿಸುತ್ತಿದೆ ಎಂದು ಆರೋಪಿಸುವುದರಲ್ಲಿ ಕಾಂಗ್ರೆಸ್ ಪಕ್ಷದವರು ಪ್ರಾಮಾಣಿಕರಾಗಿದ್ದಲ್ಲಿ, ತಾವು ಕಮ್ಯೂನಿಸ್ಟ್ ಸರಕಾರ ಮತ್ತು ಕಮ್ಯೂನಿಸ್ಟ್ ಪಕ್ಷವು ಅನುಸರಿಸಬೇಕು ಎಂದು ಹೇಳುವ ನೀತಿಯನ್ನು ಇತರ ರಾಜ್ಯಗಳಿಗೂ ಅನ್ವಯಿಸುವಂತೆ ಒಪ್ಪುವರೇ ಎಂದು ನಾನು ಧೇಬರರಿಗೆ ಕೇಳಿದೆ. ಇತರ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳ ವಿರುದ್ಧ ವಿರೋಧ ಪಕ್ಷಗಳು ಇದೇ ರೀತಿಯ ಆರೋಪಗಳನ್ನು ಮಾಡಿವೆ ಎಂಬುದನ್ನು ನಾವು ಮರೆಯುವಂತಿಲ್ಲ.

ಆದ್ದರಿಂದಾಗಿ ಧೇಬರರು ಕಮ್ಯೂನಿಸ್ಟ್ ಸರಕಾರವು ಭೇದ ನೀತಿ ಎಣಿಸುತ್ತಿದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಕಾಂಗ್ರೆಸ್ ಆಡಳಿತೆಯಲ್ಲಿ ಇತರ ರಾಜ್ಯಗಳಲ್ಲಿ ನಡೆಯುತ್ತಿರುವುದಕ್ಕೆ ಗಮನ ಕೊಡದೆ ಕೇರಳದಲ್ಲಿ ಭೇದ ಭಾವ ತೋರಲಾಗಿದೆ ಎಂದು ಹೇಳುವವರು ಕಮ್ಯೂನಿಸ್ಟ್ ಸರಕಾರದ ಮೇಲೆ ಭೇದ ಭಾವ ಎಣಿಸುತ್ತಿಲ್ಲವೇ? ಅಖಿಲ ಭಾರತ ಕಾಂಗ್ರೆಸ್ಸು, ಕಾಂಗ್ರೆಸ್ಸಿಗೊಂದು ಕಮ್ಯೂನಿಸ್ಟರಿಗೊಂದು ನೀತಿ ಅನುಸರಿಸುತ್ತಿಲ್ಲವೆ? ತಾವೇ ಭೇದ ಭಾವ ಎಣಿಸುತ್ತಿದ್ದು ಇನ್ನೊಬ್ಬರಿಗೆ ಉಪದೇಶ ಹೇಳುವುದು ಯಾವ ನ್ಯಾಯ ?

ಯೋಜನೆಯ ಪ್ರಗತಿ

ಕಾಂಗ್ರೆಸು ನಾಯಕರುಗಳು ಅನುಸರಿಸುತ್ತಿರುವ ದ್ವಿಮುಖ ನೀತಿಗೆ ಇನ್ನೊಂದು ಉದಾಹರಣೆ ನೀಡುತ್ತೇನೆ: ಧೇಬರರೊಂದಿಗೆ ಈ ವಿಷಯ ಮಾತನಾಡಲಾಗಲಿಲ್ಲ, ಏಕೆಂದರೆ ಅವರು ಪ್ರಸ್ತಾಪಿಸಲಿಲ್ಲ. ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವ ವಿಷಯದಲ್ಲಿ ಕೇರಳ ಸರಕಾರವು ಹಿಂದುಳಿದಿದೆ ಎಂದು ಅವರು ತಿಳಿಯದೆ ಮಾತನಾಡಿದ್ದಾರೆ.

ಎರ್ನಾಕುಲಂನಲ್ಲಿ ಮಾತನಾಡುತ್ತ ಧೇಬರರು ಈ ರೀತಿ ಹೇಳಿದ್ದಾರೆಂದು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ವರದಿ ಮಾಡಿದೆ: "ಕಮ್ಯೂನಿಸ್ಟ್ ಸರಕಾರವು ಯೋಜನೆಯನ್ನು ಎಷ್ಟು ಮಟ್ಟಿಗೆ ಕಾರ್ಯಗತ ಮಾಡಿದೆ ಎಂದು ನಾನು ವಿನಯಪೂರ್ವಕವಾಗಿ ಕೇಳಬಯಸುತ್ತೇನೆ. ಕಮ್ಯೂನಿಸ್ಟ್ ಸರಕಾರದ ನೀತಿಯಿಂದಾಗಿ ಯೋಜನೆಯ ಪ್ರಗತಿಯು ಸಾಕಷ್ಟಾಗಿಲ್ಲ ಎಂದು ದೂರದೃಷ್ಟಿಯಿರುವ ವಿದ್ಯಾರ್ಥಿಯಾಗಿ ನಾನು ಹೇಳಬಯಸುತ್ತೇನೆ."

ಶ್ರೀ ಧೇಬರರ ಈ ಆರೋಪ ನನಗೆ ಆಶ್ಚರ್ಯ ಉಂಟುಮಾಡಿದೆ. ದೂರದೃಷ್ಟಿಯಿರಿಸಿಕೊಂಡಿರುವ ಇವರ ಸಂಕುಚಿತ ದೃಷ್ಟಿಯನ್ನು ನಾನು ವ್ಯಕ್ತಗೊಳಿಸಬಯಸುತ್ತೇನೆ.

ಶ್ರೀ ಧೇಬರರು ಯೋಜನೆಯ ಕಾರ್ಯವು ಕೈಗಾರಿಕಾ ಹಾಗೂ ಕೃಷಿ ಕ್ಷೇತ್ರದಲ್ಲಿ ಕಾರ್ಯಗತವಾಗಬೇಕೆಂದು ಅಪೇಕ್ಷಿಸಿದ್ದಾರೆ, ಅವರ ಈ ಅಭಿಪ್ರಾಯದಲ್ಲಿ ನಾನೂ ಭಾಗಿಯಾಗಿದ್ದೇನೆ.

ಆದರೆ ಒಂದು ವಿಷಯವನ್ನು ಅವರ ನೆನಪಿಗೆ ತರಬಯಸುತ್ತೇನೆ: ಹಿಂದೆ ತಿರುವಾಂಕೂರು-ಕೊಚ್ಚಿ ರಾಜ್ಯದಲ್ಲಿ ಅವರ ಸರಕಾರವು ಆಡಳಿತೆಯಲ್ಲಿದ್ದಾಗ, ಪ್ರಥಮ ಪಂಚ ವಾರ್ಷಿಕ ಯೋಜನೆಯಲ್ಲಿ, ನೀರಾವರಿ ಮತ್ತು ಕೃಷಿ ಅಭಿವೃದ್ಧಿಗಾಗಿ 570.6 ಲಕ್ಷ ರೂ. ನಿಗದಿಯಾಗಿತ್ತು. ಆದರೆ ನಿಜವಾಗಿ ಖರ್ಚು ಮಾಡಿದ್ದು 250 3 ಲಕ್ಷ ರೂ. ಅಥವಾ ಶೇ. 43·8ರಷ್ಟು ಮಾತ್ರ ಇಡೀ ದೇಶದಲ್ಲೇ ಇದು ಅತ್ಯಂತ ಅಲ್ಪದ್ದಾಗಿತ್ತು. ಧೇಬರರು ಇದರ ಬಗ್ಗೆ ಏನೂ ಹೇಳದೆ ಆರೋಪಿಸುವುದಕ್ಕಾಗಿ ನಮ್ಮ ಬಗ್ಗೆ ಹೇಳಿರುವುದು, ಅವರ ಕುಹಕ ನೀತಿಯನ್ನು ತೋರಿಸುತ್ತದೆ. ಇದೇ ಬಗೆಯಲ್ಲಿ ಕೈಗಾರಿಕಾ ಕ್ಷೇತ್ರದಲ್ಲೂ ಸಹ ಹಿಂದಿನ ಸರಕಾರವು ಒಟ್ಟು 111·8 ಲಕ್ಷ ರೂ.ಗಳಲ್ಲಿ 58·5 ಲಕ್ಷ ರೂ. ಮಾತ್ರ ಬಳಸಿತ್ತು, ಗ್ರಾಮಾಂತರ ಕೈಗಾರಿಕಾ ಕ್ಷೇತ್ರದಲ್ಲಿ ಒಟ್ಟು 89 ಲಕ್ಷ ರೂ.ಗಳಲ್ಲಿ ಕೇವಲ 33 ಲಕ್ಷ ರೂ. ಮಾತ್ರ ಬಳಸಲಾಗಿತ್ತು. ತಮ್ಮ ಪಕ್ಷದ ನೇತೃತ್ವದಲ್ಲಿದ್ದ ಸರಕಾರ ಯೋಜನೆಯನ್ನು ಸರಿಯಾಗಿ ಕಾರ್ಯಗತಗೊಳಿಸಿತೇ ಎಂಬುದನ್ನು ಧೇಬರರೇ ಪರಿಶೀಲಿಸಲಿ.

ನಿಜಾಂಶವೇನು ?

ಈ ನಾವು ಅಧಿಕಾರಕ್ಕೆ ಬಂದ ನಂತರದಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಕೃಷಿ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಕಾರ್ಯಗಳಿಗೆ ಮೀಸಲಾಗಿರುವುದು 1956–57ಕ್ಕೆ 288·66 ಲಕ್ಷ ರೂ 1957-58ಕ್ಕೆ 277·14 ಲಕ್ಷ ರೂ ಆಗಿದೆ. ಇದರಲ್ಲಿ ವಿನಿಯೋಗಿಸಲಾಗಿರುವುದು ಎರಡು ವರ್ಷಗಳಲ್ಲಿ 152·24 ಲಕ್ಷ ರೂ ಮತ್ತು 192·40 ಲಕ್ಷ ರೂ ಆಗಿದೆ. ಅಂದರೆ 1956—57ರಲ್ಲಿ ಶೇಕಡ 52·8 ರಷ್ಟು ಮತ್ತು 1957—58ರಲ್ಲಿ 69·5 ರಷ್ಟು ಆಗಿದೆ.

ಮೊದಲನೆಯ ಪಂಚವಾರ್ಷಿಕ ಯೋಜನೆಗೂ ಎರಡನೆ ಪಂಚವಾರ್ಷಿಕ ಯೋಜನೆಗೂ ಹೋಲಿಸಿ ನೋಡಿದಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಶೇ. 43ರಿಂದ 52ರವರೆಗೆ ಮೊದಲ ವರ್ಷದಲ್ಲೂ 52ರಿಂದ 69ರವರೆಗೆ ಎರಡನೆ ವರ್ಷದಲ್ಲೂ ಪ್ರಗತಿದಾಯಕವಾಗಿ ವಿನಿಯೋಗವಾಗಿರುವುದು ಗೋಚರವಾಗುತ್ತದೆ.

ಯೋಜನೆಯ ಮೂರನೆಯ ವರ್ಷದಲ್ಲಿ ಮೊದಲ ಮೂರು ತಿಂಗಳ ವೆಚ್ಚವನ್ನು ಪರಿಶೀಲಿಸೋಣ. 1957-58ಕ್ಕೆ ಹೋಲಿಸಿದಲ್ಲಿ ಈ ಕಾಲಾವಧಿಯಲ್ಲಿ 89·41 ಲಕ್ಷ ರೂ ಆಗಿತ್ತು, ಈ ವರ್ಷದಲ್ಲಿ ಅದೇ ಕಾಲದಲ್ಲಿ ವಿನಿಯೋಗ 226·58 ಲಕ್ಷ ರೂ ಆಗಿದೆ.

ದೂರದೃಷ್ಟಿ ಇರಿಸಿಕೊಂಡಿರುವ ಧೇಬರರಿಗೆ ಈ ಅಂಕಿ ಅಂಶಗಳು ಗೋಚರವಾಗದಿದ್ದುದು ಆಶ್ಚರ್ಯಕರವಾಗಿದೆ. ಈಗ ವಿನಿಯೋಗಿಸಲಾಗಿರುವ ಹಾಗೂ ಯೋಜನೆಯ ಕಾರ್ಯಗತಗೊಳಿಸುವ ಕಾರ್ಯದಲ್ಲಿ ನನಗೆ ಪೂರ್ಣ ತೃಪ್ತಿಯಿಲ್ಲ. ನೂರಕ್ಕೆ ನೂರು ಪಾಲು ವಿನಿಯೋಗವಾಗಬೇಕೆಂಬುದೇ ನಮ್ಮ ಬಯಕೆ, ಅದಕ್ಕಾಗಿ ಶ್ರಮಿಸುತ್ತೇವೆ. ಕಮ್ಯೂನಿಸ್ಟ್ ಮಂತ್ರಿಮಂಡಲವೇ ಇದನ್ನು ಸಾಧಿಸಿದೆ ಎಂದು ನಾನು ಹೇಳುವುದಿಲ್ಲ. ಅಧಿಕಾರಿಗಳು ತ್ವರೆಯಿಂದ ಕೆಲಸಮಾಡಿ ಇದು ಸಾಧ್ಯವಾಗಿದೆ, ಮುಂದೆಯೂ ಹೆಚ್ಚು ಪ್ರಗತಿ ಸಾಧ್ಯವಿದೆ. ಈ ಸಂದರ್ಭದಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ.

ಕಾಂಗ್ರೆಸ್‌ನ ಉದ್ದೇಶವೇನು?

ಅದೇ ಸಮಯದಲ್ಲಿ ಕಾಂಗ್ರೆಸ್‌ನ ನಾಯಕರುಗಳ ಉದ್ದೇಶ ಮತ್ತು ಚಟುವಟಿಕೆಯನ್ನು ಕುರಿತು ನನ್ನ ಅಭಿಪ್ರಾಯ ವ್ಯಕ್ತಗೊಳಿಸಿದ್ದೇನೆ. ಅದನ್ನು ಸಾರ್ವಜನಿಕರ ಮುಂದಿಡ ಬಯಸುತ್ತೇನೆ. ಕೇರಳ ರಾಜ್ಯದಲ್ಲಿ ಕಾಂಗ್ರೆಸ್ ನಾಯಕರುಗಳು ಅಧಿಕಾರಿಗಳ ಮಧ್ಯದಲ್ಲಿ ಸರಕಾರದ ಆದೇಶಗಳನ್ನು ಉಲ್ಲಂಘಿಸುವಂತೆ ಮಾಡಲು ಯತ್ನಿಸುತ್ತಿದ್ದಾರೆ: ಕಮ್ಯೂನಿಸ್ಟ್ ಸರಕಾರವು ಯಾವುದೇ ಆಡಳಿತ ಕ್ರಮ ತೆಗೆದುಕೊಂಡರೂ ಸಹ ಅದನ್ನು ಕೇಂದ್ರ ಸರಕಾರವು ಬದಿಗೊತ್ತಬಹುದೆಂದೂ, ಆದರಿಂದ ಯಾರೂ ಭಯಪಡಬೇಕಾದ್ದಿಲ್ಲವೆಂದೂ ಅಧಿಕಾರಿಗಳಲ್ಲಿ ತಿಳಿಸಲು ಯತ್ನಿಸಲಾಗುತ್ತಿದೆ.

ಈ ಉದ್ದೇಶ ಸಾಧನೆಗಾಗಿಯೇ ಪಾರ್ಲಿಮೆಂಟಿನಲ್ಲಿ, ಪತ್ರಿಕೆಗಳ ಮೂಲಕ, ಮತ್ತಿತರ ರೀತಿಯಲ್ಲಿ ಸರಕಾರದ ಸಾಮಾನ್ಯ ಆಡಳಿತ ಕ್ರಮಗಳನ್ನೂ ಸಹ ಪ್ರಶ್ನಿಸಲಾಗುತ್ತಿದೆ. ಅಖಿಲ ಭಾರತ ಕಾಂಗ್ರೆಸ್ ನಾಯಕರುಗಳೂ ಮತ್ತು ಕೇಂದ್ರ ಸರಕಾರದ ಸಚಿವರುಗಳೂ ಸಹ ಇದನ್ನು ಮಾಡುತ್ತಿದ್ದಾರೆ.

ಇವೆಲ್ಲವನ್ನೂ ಸಹ ಉದ್ದೇಶಪೂರ್ವಕವಾಗಿ, ಅಧಿಕಾರಿಗಳು ಸರಕಾರದ ಆಜ್ಞೆಯನ್ನು ಪಾಲಿಸದೆ ಉಲ್ಲಂಘಿಸುವಂತೆ ಪ್ರೇರೇಪಿಸುವುದೇ ಆಗಿದೆ. ಇಂಥ ಪ್ರಚಾರ ನಡೆದಲ್ಲಿ, ಆದರ ಪರಿಣಾಮವು ತುಂಬ ವಿಲಕ್ಷಣವಾದೀತೆಂದು ನಾನು ಧೇಬರರಿಗೆ ತಿಳಿಸಿದ್ದೇನೆ. ಅದು ರಾಜ್ಯ ಸರಕಾರ ಮತ್ತು ಅಧಿಕಾರಿಗಳೊಂದಿಗಿನ ಸಂಬಂಧ, ಹಾಗೂ ಕೇಂದ್ರ ಸರಕಾರದೊಂದಿಗೆ ರಾಜ್ಯ ಸರಕಾರದ ಸಂಬಂಧ ಇವುಗಳಿಗೂ ಪರಿಣಾಮ ಬೀರುತ್ತದೆ. ಇದು ಕಾಂಗ್ರೆಸ್ ಪಕ್ಷವು ನೇರವಾಗಿ ಅಧಿಕಾರದಲ್ಲಿ ಪ್ರವೇಶಿಸುತ್ತಿರುವುದಕ್ಕೆ ನಿದರ್ಶನವಲ್ಲವೆ ? ಧೇಬರ್‌ರವರು ಇದನ್ನು ಯೋಚಿಸಲಿ.

ಸರಕಾರ ಮತ್ತು ವಿರೋಧ ಪಕ್ಷಗಳ ನಡುವೆ ಸೌಹಾರ್ದಯುತವಾದ ಸಂಬಂಧ ವೇರ್ಪಡಬೇಕೆಂಬ ಧೇಬರರ ಆಶಯದಲ್ಲಿ ನನ್ನ ಪೂರ್ಣ ಸಮ್ಮತಿ ಇದೆ. ಆದರೆ ರಾಜ್ಯ ಕಾಂಗ್ರೆಸ್ ನಾಯಕರುಗಳು ಮತ್ತು ಧೇಬರರ ಇತರ ಅನುಯಾಯಿಗಳು ನಡೆಸುತ್ತಿರುವ ದೈನಂದಿನ ಚಟುವಟಿಕೆಯು ಇಂಥ ಸೌಹಾರ್ದ ಸಂಬಂಧಕ್ಕೆ ಸರಿಯಾದ ವಾತಾವರಣ ಉಂಟು ಮಾಡುತ್ತಿಲ್ಲ ಎಂದು ಹೇಳಬಯಸುತ್ತೇನೆ.

ಸರಕಾರ ಮತ್ತು ಕಮ್ಯೂನಿಸ್ಟ್ ಪಾರ್ಟಿಯು ಪರಿಸ್ಥಿತಿಯನ್ನು ಉತ್ತಮಗೊಳಿಸಲು ಮತ್ತು ಪ್ರಗತಿ ಸಾಧಿಸಲು ಎಲ್ಲ ರೀತಿಯಲ್ಲಿಯೂ ಯತ್ನಿಸುವುದೆಂದು ಧೇಬರರಿಗೂ ಮತ್ತು ಸಾರ್ವಜನಿಕರಿಗೂ ನಾನು ಭರವಸೆ ಈಯುತ್ತೇನೆ.

. . . ಹುರಿಗಾಳು . . .

(೯ನೇ ಪುಟದಿಂದ)

ವಿಷಯವನ್ನು ದೊಡ್ಡದುಮಾಡಿ, ಮಂತ್ರಿವರ್ಯರುಗಳನ್ನು ಚಿಂತೆಗೆ ಮಾಡುವುದು ಬೇಡ ಅಲ್ಲವೆ?

० ० ० ०

ಪಂಜಾಬ್ ಪ್ರದೇಶ ಕಾಂಗ್ರೆಸ್ ಕಛೇರಿಯಲ್ಲಿ ಮಂಡಲ ಪ್ರದೇಶ ಕಾಂಗ್ರೆಸ್ಸಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ್ಗೆ, ಪರಸ್ಪರ ವಿರೋಧ ಗುಂಪುಗಳ ನಡುವೆ ಕಿತ್ತಾಟ ಹೆಚ್ಚಾಯಿತು. ವಾಗ್ಯುದ್ಧ ಸಾಲದಾಗಿ, ಕಚ್ಚಾಟ ಒಂದು ಹೆಜ್ಜೆ ಮುಂದುವರಿದು ಹೊಡೆದಾಟ ಆರಂಭವಾಯಿತು. ಗುಂಡಾಗಳನ್ನು ತಂದು ದೊಡ್ಡ ಕಾಳಗವೇ ಆರಂಭಿಸಲಾಯಿತು. ಪರಿಸ್ಥಿತಿ ಹತೋಟಿಗೆ ತರಲು ಕಛೇರಿಗೆ ಪೋಲೀಸು ಪಡೆ ಕರೆಸಿ ಎಲ್ಲರನ್ನೂ ಹೊರಹಾಕಲಾಯಿತು.

— ಸುದ್ದಿ, ಪಾಟಿಯಾಲ
ಸೆಪ್ಟಂಬರ್ 13

ಮೈಸೂರು ಪ್ರದೇಶ ಕಾಂಗ್ರೆಸ್ ನಾಯಕರು ದಯವಿಟ್ಟು ಇದನ್ನು ಗಮನಿಸಬೇಕಾಗಿ ಕೋರಿದೆ.

"ಚೌಚೌವಾಲಾ"

ರೂಪಾಯಿ 2,000 ಪಾರ್ಟಿ ನಿಧಿಗೆ ಸಹಾಯ

ಪಾರ್ಟಿಯ 2,000 ರೂಪಾಯಿ ನಿಧಿ ಶೇಖರಣೆಯ ಕಾರ್ಯದಲ್ಲಿ ಕೆಲವು ಪಾರ್ಟಿ ಘಟಕಗಳು ತಮ್ಮ ಪಾಲನ್ನು ಪೂರ್ಣವಾಗಿ ಸಂದಾಯ ಮಾಡಿವೆ. ಈವರೆಗೆ ಇನ್ನೂ ಪಾವತಿ ಮಾಡದಿರುವ ಘಟಕಗಳು ತ್ವರೆಯಿಂದ ಕಳಿಸಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಾಚಕರೂ, ಪಾರ್ಟಿ ಹಿತೈಷಿಗಳು ಉದಾರವಾಗಿ ಸಹಾಯ ನೀಡಿ, ನಿಧಿ ಶೇಖರಣೆ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕೆಂದು ವಿನಂತಿಸುತ್ತೇವೆ.

ಹಿಂದೆ ವಸೂಲಾದ್ದು ರೂ.	848-50
ಮುಂಬಯಿ ಹೊಟೇಲು ಕೆಲಸಗಾರರಿಂದ	25—00
ಟಿ. ಎಸ್. ಹೆಗ್ಡೆ	25—00
	898-50

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone 3810